ಅಸಮವಾಗಿ ಹಂಚಿಹೋಗಿದ್ದ ಕೃಷಿ ಭೂಮಿಯಿಂದು ಬಡವರ ಶೋಷಣೆ೦ಯಾಗುತ್ತಿರುವುದನ್ನು ಅರಿತು ಭೂಸುಧಾರಣೆ೦ಯ ಮೂಲಕ ಕೃಷಿ ಭೂಮಿ೦ಯ ಮರುಹಂಚಿಕೆ೦ಯುನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಕೃಷಿ ಹಿಡುವಳಿಗಳು ಚಿಕ್ಕದಾದುವಾದರೂ, ಕೃಷಿ ಉತ್ಪಾದಕತೆ ಹೆಚ್ಚಿತು. ಎಲ್ಲಾ ಉತ್ಪಾದಕ ವರ್ಗದವರಿಗೂ ಅವಕಾಶ ನೀಡುವುದರ ಮೂಲಕ ಕೃಷಿ ಬೆಳೆವಣಿಗೆಗೆ ಸೂಕ್ತ ವಾತಾವರಣವನ್ನು ನಿರ್ಮಿಸಲಾಯಿತು. ಈಗ ರೈತರಲ್ಲಿ ಹೆಚ್ಚಿನವರು ಸಣ್ಣ ಹಿಡುವಳಿದಾರರು ಎರಡು ಎಕರೆಗಳಿಂತ ಕಡಿಮೆ ಕೃಷಿ ಭೂಮಿ ಹೊಂದಿರುವ ರೈತರ ಪ್ರಮಾಣ 70 ಪ್ರತಿಶತದಷ್ಟಿದೆ. ಸೂಕ್ತ ಮಾರ್ಗದರ್ಶನ ಮತ್ತು ಆರ್ಥಿಕ ನೆರವಿದ್ದರೆ ತಾವೂ ಕೂಡ ಆಧುನಿಕ ಬೇಸಾ೦ಯ ಕ್ರಮಗಳನ್ನು ಅಳವಡಿಸಿಕೊಂಡು ಉತ್ತಮ ಬೆಳೆ ಬೆಳೆ೦ಯಬಲ್ಲೆವು. ಎಂಬುದನ್ನು ಸಣ್ಣ ರೈತರೂ ಕೂಡ ತೋರಿಸಿಕೊಟ್ಟಿದ್ದಾರೆ. [7]

ದೇಶದಲ್ಲಾದ ಹಸಿರು ಕ್ರಾಂತಿ ಅನೇಕ ನಕಾರಾತ್ಮಕ ಬೆಳವಣಿಗೆಗಳಿಗೂ ಕಾರಣವಾಗಿದೆ. ರಾಸಾ೦ಯನಿಕ ಗೊಬ್ಬರಗಳ ಬಳಕೆ, ಕೀಟನಾಶಕಗಳ ಬಳಕೆ ಹಾಗೂ ಏಕರೂಪ ಬೆಳೆ ಪದ್ಧತಿಗಳು ಜೈವಿಕ ಪರಿಸರದ ಸಮತೋಲನವನ್ನೇ ಕೆಡಿಸಿ ಬಿಟ್ಟಿವೆ. ಮೇಲ್ಮೈ ಮಣ್ಣಿನ ಸಾರಾಂಶದ ಕೊರತೆ ಮತ್ತು ಅರಣ್ಯ ನಾಶ, ಅಷ್ಟೇ

ಅಲ್ಲದೇ ಅನೇಕ ಆರೋಗ್ಯ ಕುರಿತ ಸಮಸ್ಯೆಗಳು ಹಸಿರು ಕ್ರಾಂತಿ೦ಯ ಫಲಶ್ರುತಿಗಳು. ಇಳುವರಿ ಅಧಿಕಗೊಂಡಿತು ಎಂಬ ಒಂದಂಶ ಬಿಟ್ಟರೆ, ಆಧುನಿಕ ಕೃಷಿಯಿಂದ ಸಮಸ್ಯೆಗಳು ಹುಟ್ಟಿಕೊಂಡದ್ದೇ ಹೆಚ್ಚು. ಹೊಸ ಕೃಷಿ ಪದ್ಧತಿಗಳು ಹಾಗೂ ಪಶುಸಂಗೋಪನೆ ಫಲಕಾರಿ೦ಯಾಗಬೇಕಾದರೆ ಅವುಗಳನ್ನು ದೇಶೀ೦ಯ ವಾತಾವರಣಗಳಿಗೆ ಹೊಂದಿಕೊಂಡ ಹಳೆ೦ಯ ಕೃಷಿ ಪದ್ಧತಿಗಳ ಆಧಾರದಿಂದಲೇ ಅವುಗಳನ್ನು ಅಭಿವೃದ್ಧಿ ಪಡಿಸಬೇಕು.[8]

ಜೈವಿಕ ತಂತ್ರಜ್ಞಾನದ ಮಹತ್ತರ ಅಭಿವೃದ್ಧಿಯಿಂದಾಗಿ ರೂಪುಗೊಂಡ ಹೊಸ ತಳಿಗಳು ಅಧಿಕ ಇಳುವರಿ೦ಯನ್ನು ನೀಡುತ್ತಿವೆ. ರೋಗ ನಿರೋಧಕ ಸಾಮರ್ಥ್ಯ ಹೊಂದಿರುವ ತಳಿಗಳನ್ನು ಅಭಿವೃದ್ಧಿಪಡಿಸಲು ಸೂಕ್ಷ್ಮಾಣು ಜೀವಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಸೂಕ್ಷ್ಮಾಣು ಜೀವಿಗಳು ಸಸ್ಯದ ಕೆಲವೊಂದು ಗುಣಗಳನ್ನು ವರ್ಧಿಸಲು ಕೂಡ ಸಹಕಾರಿ. ಜೈವಿಕ ತಂತ್ರಜ್ಞಾನದಲ್ಲಾದ ಅಭಿವೃದ್ಧಿಯಿಂದ 21ನೇ೦ಯ ಶತಮಾನದಲ್ಲಿ ಜನಸಂಖ್ಯಾ ಸ್ಫೋಟದಿಂದುಂಟಾಗಬಹುದಾದ ಆಹಾರದ ಕೊರತೆ೦ಯ ಸವಾಲನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯ ಎಂಬುವುದು ವಿಜ್ಞಾನಿಗಳ ಅಂಬೋಣ.[9]

ಇತ್ತೀಚೆಗೆ ಜನಪ್ರಿ೦ಯವಾಗುತ್ತಿರುವ ತಳಿಶಾಸ್ತ್ರದ ಉತ್ಪನ್ನಗಳಾದ ಕೀಟನಾಶಕ, ಕಳೆನಾಶಕ ಹಾಗೂ ಕುರಿ–ಹಂದಿ೦ಯಂತಹ ಪ್ರಾಣಿಗಳಿಗೆ ಸಾಮಾಜಿಕ ಹಾಗೂ ಸಾರ್ವಜನಿಕ ಚಳುವಳಿಗಾರರು, ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಜೈವಿಕ ತಂತ್ರಜ್ಞಾನದ ಅಳವಡಿಕೆಯಿಂದ, ಪರಿಸರ ವ್ಯವಸ್ಥೆ೦ಯ ಮೇಲೆ ಸ್ವಲ್ಪ ಮಟ್ಟಿನ ಬೆದರಿಕೆ ಇರುವುದನ್ನು ವಿಜ್ಞಾನಿಗಳು ಕೂಡ ಒಪ್ಪಿಕೊಳ್ಳುತ್ತಾರೆ. ಮರುಜೋಡಿತ ಡಿ.ಎನ್.ಎ.(ರಿಕಾಂಟಿನಂಟ್ ಡಿ.ಎನ್.ಎ) ೦ಯನ್ನು ಹೊಂದಿರುವ ಜೀವಿಗಳನ್ನು ಪರಿಸರ ವ್ಯವಸ್ಥೆಗೆ ಸೇರಿಸುವುದಕ್ಕೆ ಅನೇಕ ವಿಜ್ಞಾನಿಗಳು ಹಾಗೂ ಸಾರ್ವಜನಿಕರು ಕೂಡಾ ಭಾರೀ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಹೈಬ್ರಿಡ್ ತಳಿಗಳೂ ಕೂಡಾ ವಿಫಲವಾಗುತ್ತಿವೆ. ಆಂಧ್ರಪ್ರದೇಶದ ವಾರಂಗಲ್ ಪ್ರಕರಣ ಅದಕ್ಕೊಂದು ಸಜೀವ ನಿದರ್ಶನ. ವಾರಂಗಲ್‌ನಲ್ಲಿ ಹತ್ತಿ ಬೆಳೆ೦ಯುವ ಸಂಪ್ರದಾ೦ಯವಿರಲಿಲ್ಲ. ಮುಕ್ತ ವ್ಯಾಪಾರದ ಪರಿಣಾಮವಾಗಿ ಸಾಂಪ್ರದಾಯಿಕ ಬೆಳೆಗಳಿಂದ ಭತ್ತ, ದ್ವಿದಳ ಧಾನ್ಯ, ಎಣ್ಣೆ ಕಾಳು ಮತ್ತು ಇತರ ತರಕಾರಿಗಳನ್ನು ಬೆಳೆ೦ಯುತ್ತಿದ್ದ ರೈತರನ್ನು ಹತ್ತಿ ಬೆಳೆ೦ಯುವಂತೆ ಕೆಲವು ಬೀಜ ಕಂಪೆನಿಗಳು ಪ್ರೇರೇಪಿಸಿದವು. ನಿಮ್ಮನ್ನು ಲಕ್ಷಾಧೀಶರನ್ನಾಗಿಸುತ್ತೇವೆ ಎಂಬ ಭರವಸೆ೦ಯೊಂದಿಗೆ ಆ ಕಂಪೆನಿಗಳು ಹೈಬ್ರೀಡ್ ಹತ್ತಿ೦ಯ ಬೀಜಗಳನ್ನೊದಗಿಸಿದವು. ಹತ್ತಿ ಬೀಜವನ್ನು "ಬಿಳಿ ಚಿನ್ನ" ಎಂದು ಕರೆ೦ಯಲಾಗಿತ್ತು. ಆದರೆ ಅದನ್ನು ಬಿತ್ತಿದ ರೈತರು ಲಕ್ಷಾಧೀಶರಾಗುವ ಬದಲು ಅವರಿಗೆ ಉಳಿದದ್ದು ಆತ್ಮಹತ್ಯೆ೦ಯ ಮಾರ್ಗ ಮಾತ್ರ [10]

ಕೃಷಿಕರಲ್ಲಿ ಇತ್ತೀಚೆಗೆ ಆಧುನಿಕ ಬೇಸಾ೦ಯ ಪದ್ಧತಿಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಹೆಚ್ಚುತ್ತಿದೆ. ಕೀಟನಾಶಕಗಳು ಹಾಗೂ ರಸಗೊಬ್ಬರಗಳು ದಿನೇ ದಿನೇ ದುಬಾರಿ೦ಯಾಗುತ್ತಿವೆ. ರೈತರು ಅವುಗಳತ್ತ ಗಮನ ಹರಿಸುವುದೂ ಕಡಿಮೆ೦ಯಾಗುತ್ತಿದೆ. (ಅಡಿಕೆ ಪತ್ರಿಕೆ ಸಂ. ಮೇ.2003) ಸಾವ೦ಯವ ಕೃಷಿ ಪದ್ಧತಿ ದಿನೇ

ದಿನೇ ಜನಪ್ರಿ0ಯವಾಗುತ್ತಿದೆ. ಸಾಂಪ್ರದಾಯಿಕ ತಳಿಗಳಿಗೆ ಕೀಟಬಾಧೆ ಕಡಿಮೆ ಇತ್ತು. ಜೈವಿಕ ತಂತ್ರಜ್ಞಾನದಿಂದ ಸಾಕಾರಗೊಂಡ ತಳಿಗಳಿಗೆ ಕೀಟನಾಶಕ ಬಳಕೆ0ಯ ಅಗತ್ಯ ಕಡಿಮೆ. ಅವುಗಳಿಂದ ದೊರೆವ ಇಳುವರಿ0ಯೂ ಹೆಚ್ಚು, ಎಂದು ಹೇಳಲಾಗಿತ್ತಾದರೂ, ಅವು ಅದಕ್ಕೆ ತದ್ವಿರುದ್ಧ. ಪ್ರತಿಫಲ ನೀಡಿವೆ. ಅವುಗಳು ಕಡಿಮೆ ಇಳುವರಿ ನೀಡಿ ಹೆಚ್ಚು ಕೀಟನಾಶಕಗಳನ್ನು ಬಳಸಿಕೊಂಡಿವೆ. ಹೊಸತಳಿಗಳ ಆಸೆಗೆ ಮಾರುಹೋಗಿ ಅದೆಷ್ಟೋ ಸಾಂಪ್ರದಾಯಿಕ ತಳಿಗಳು ನಾಶಗೊಂಡಿವೆ. ಇದು ಹೀಗೆ ಮುಂದುವರಿದರೆ ಇನ್ನಷ್ಟು ಸಾಂಪ್ರದಾಯಿಕ ತಳಿಗಳನ್ನು ಕಳೆದುಕೊಳ್ಳುವುದು ಖಂಡಿತಾ ಅದರೊಂದಿಗೆ ಕೀಟಬಾಧೆ0ಯ ಅಧಿಕಗೊಳ್ಳುವ ಸಾಧ್ಯತೆಗಳು ಹೆಚ್ಚು ಎಂದು ಡಾ.ವಂದನಾ ಶಿವರವರು ಅಭಿಪ್ರಾ0ಯ ಪಡುತ್ತಾರೆ. [11]

3/00 ಇತ್ತೀಚೆಗೆ ಸುಸ್ಥಿರ ಕೃಷಿ ಪದ್ಧತಿ ಹೆಚ್ಚು-ಹೆಚ್ಚು ಜನಪ್ರಿ0ಯವಾಗುತ್ತಿದೆ. ಸುಸ್ಥಿರ ಕೃಷಿ0ಯಲ್ಲಿ ಕೃಷಿ ಪ್ರಕ್ರಿ0ಯೆ0ಯ ದೀರ್ಘಕಾಲಿಕ ಸ್ಥಿರತೆ ಪರಿಸರ ಸಂರಕ್ಷಣೆ, ಅಷ್ಟೇ ಅಲ್ಲದೇ ಬಳಕೆ ದಹನ ಆರೋಗ್ಯ ರಕ್ಷಣೆ0ಯನ್ನು ಸಾಧಿಸಲು ಒತ್ತು ನೀಡಲಾಗುತ್ತದೆ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಗಳನ್ನು ಹಿತಮಿತವಾಗಿ ಬಳಸಲಾಗುತ್ತದೆ. ಸುಸ್ಥಿರ ಕೃಷಿ0ಯ ಮುಖ್ಯ ಉದ್ದೇಶ ಕೃಷಿಯಿಂದ ಪರಿಸರ ಮೇಲಾಗಬಹುದಾದ ದುಷ್ಪರಿಣಾಮಗಳನ್ನು ಆದಷ್ಟು ಕಡಿಮೆ ಮಾಡುವುದು. ಈ ಕೃಷಿ ಪದ್ಧತಿ0ಯಲ್ಲಿ ನಿರ್ದಿಷ್ಟ ಮಟ್ಟದ ಲಾಭಗಳಿಕೆ0ಯನ್ನು ಮಾತ್ರ ಉದ್ದೇಶವಾಗಿರಿಸಿಕೊಳ್ಳಲಾಗುತ್ತದೆ. ಸುಸ್ಥಿರ ಕೃಷಿ0ಯು, ಪ್ರಕೃತಿ0ಯ ಸಿದ್ಧಾಂತಗಳಿಗನುಗುಣವಾಗಿ0ಯೇ ರೂಪಿತವಾಗಿದ್ದು, ಸ್ಥಳೀ0ಯ ಆರ್ಥಿಕತೆ, ಸಂಸ್ಕೃತಿಗಳ ಆಧಾರದ ಮೇಲೆ ಕೃಷಿ ಬೆಳವಣಿಗೆ ಒತ್ತು ನೀಡಲಾಗುತ್ತಿದೆ. ಈ ಪದ್ಧತಿ ಭಾರತ ದೇಶಕ್ಕೆ ಹೇಳಿ ಮಾಡಿಸಿದಂತಿದೆ. [12]

ಭಾರತ 1991ರಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಕೃಷಿ ಕ್ಷೇತ್ರದಲ್ಲಿ ಉಂಟಾಗಬಹುದಾದ ಪ್ರತಿಕೂಲ ಪರಿಣಾಮಗಳ ಬಗ್ಗೆ ಜನರಲ್ಲಿ ಆತಂಕ ಮನೆಮಾಡಿದೆ. ಮುಕ್ತ ಮಾರುಕಟ್ಟೆ0ಯು ರಾಷ್ಟ್ರೀ0ಯ ಆರ್ಥಿಕತೆಗೆ ಲಾಭದಾ0ಯಕವಾಗಬೇಕಿತ್ತು. ಆದರೆ ಹಾಗೆ ಆಗುತ್ತಿಲ್ಲ. ರೈತರ ಆತ್ಮಹತ್ಯೆ0ಯ ಪಿಡುಗು ಕೃಷಿ ಮಾರುಕಟ್ಟೆ ಉದಾರೀಕರಣದ ಪ್ರತಿಫಲ ಜಾಗತೀಕರಣದ ಪ್ರಭಾವದಿಂದ ರೈತ ತಾನು ಬಿತ್ತುವ ಬೀಜಗಳನ್ನು ಖಾಸಗೀ ಸಂಸ್ಥೆಗಳಿಂದಲೇ ಪಡೆ0ಯ ಬೇಕಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ರೈತರಿಗೆ ಸಾಕಷ್ಟು. ಆರ್ಥಿಕ ಧನಸಹಾ0ಯ ನೀಡಿ ಅವರ ರೈತರನ್ನು ರಕ್ಷಿಸಬಲ್ಲವು. ಆದರೆ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಅಷ್ಟು ಸಹಾ0ಯಧನ ನೀಡುವ ಸಾಮರ್ಥ್ಯವಿಲ್ಲ ಆದರೂ ಕೂಡ ಭಾರತದಂತಹ ದೇಶದ ರೈತರು, ಅಂತರಾಷ್ಟ್ರೀ0ಯ ಮಾರುಕಟ್ಟೆ0ಯಲ್ಲಿ ಸ್ಪರ್ಧಿಸಬೇಕಾದರೆ ಉತ್ಪನ್ನದ ಗುಣಮಟ್ಟದ ಮುಂದಿರುವ ಸವಾಲುಗಳು ಹಲವು. [13]

3.5 ಭೂಮಿ0ು ಗಾತ್ರ ಮತ್ತು ಉತ್ಪಾದಕತೆ:

ಕೃಷಿ ಭೂಮಿ0ು ಗಾತ್ರ ಮತ್ತು ಉತ್ಪಾದಕತೆಗಳ ನಡುವಣ ಸಂಬಂಧವನ್ನು ವಿಶ್ಲೇಷಿಸಿದವರಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಡಾ|| ಅಮರ್ತ್ಯಸೇನ್ ಮೊದಲಿಗರು. ಕೃಷಿ ಕುಟುಂಬದ ಶ್ರಮವನ್ನು ಹಣದ ರೂಪದಲ್ಲಿ ಗಣನೆಗೆ ತೆಗೆದುಕೊಂಡರೆ ಬಹುತೇಕವಾಗಿ ಭಾರತದ ಕೃಷಿ ಲಾಭದಾ0ುಕವಾಗಿಲ್ಲ. ಕೃಷಿ ಹಿಡುವಳಿಗಳ ಗಾತ್ರ ಜೊತೆಗೆ ಲಾಭದಾ0ುಕದೊಂದಿಗೆ ನೇರ ಸಂಬಂಧ ಹೊಂದಿದೆ. ಹಿಡುವಳಿಗಳ ಗಾತ್ರ ಚಿಕ್ಕದಿದ್ದರೆ ಲಾಭದಾ0ು ಕಡಿಮೆ. ಹಿಡುವಳಿಗಳ ಗಾತ್ರ ದೊಡ್ಡದಿದ್ದರೆ ಲಾಭದಾ0ು ಅಧಿಕವೆಂದು ಅಮರ್ತ್ಯಸೇನ್ ತಮ್ಮ ಸಂಶೋಧನೆಗಳ ಮೂಲಕ ಕಂಡುಕೊಂಡಿದ್ದಾರೆ.[14]

ಅಮರ್ತ್ಯಸೇನ್‌ರ ಅಭಿಪ್ರಾ0ುವನ್ನು ಎರಡು ಪ್ರಸ್ತಾವನೆಗಳಲ್ಲಿ ವಿವರಿಸಬಹುದು.

1. ***ಭಾರತದಲ್ಲಿ ಸಣ್ಣ ಹಿಡುವಳಿಗಳು ಲಾಭದಾಯಕವಲ್ಲ:*** ಭಾರತದಲ್ಲಿ ಅತಿ ಸಣ್ಣ ಮತ್ತು ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆ0ುಲ್ಲಿದ್ದಾರೆ. ಅಂತಹ ಹಿಡುವಳಿಗಳಲ್ಲಿ ಇಡೀ ಕುಟುಂಬ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತದೆ ಭೂಮಿ ಮತ್ತು ಶ್ರಮದ ಮೌಲ್ಯವನ್ನು ಪರಿಗಣಿಸಿದ ಕಾರಣ ಕೃಷಿ ಚಟುವಟಿಕೆಗಳು ಲಾಭದಾ0ುಕವಾಗಿತ್ತೆಂದು ಕುಟುಂಬಗಳು ಭಾವಿಸುತ್ತವೆ. ನೈಜಸ್ಥಿತಿ ಅದಕ್ಕೆ ವಿರುದ್ಧವಾಗಿರುತ್ತದೆ. ಭೂಮಿ0ು ಮತ್ತು ಶ್ರಮದ ಮೌಲ್ಯವನ್ನು ಪರಿಗಣಿಸಿದರೆ ಕೃಷಿ0ುು ಲಾಭದಾ0ುಕ ವೃತ್ತಿ0ುಲ್ಲ ಎನ್ನುವುದು ಅರಿವಾಗುತ್ತದೆ.
2. ***ದೊಡ್ಡ ಹಿಡುವಳಿಗಳು ಲಾಭದಾಯಕವಾಗಿರುತ್ತವೆ:*** ಹಿಡುವಳಿಗಳ ಗಾತ್ರ ದೊಡ್ಡದಿದ್ದರೆ ಮತ್ತು ಶ್ರಮ ಬಂಡವಾಳ, ಗೊಬ್ಬರ, ನೀರು, ಇತ್ಯಾದಿಗಳ ಬಳಕೆ ಹೆಚ್ಚಾದರೆ ಲಾಭದಾ0ು ಅಧಿಕವಾಗುತ್ತದೆ. ಹಿಡುವಳಿಗಳ ಗಾತ್ರದೊಡನೆ ಲಾಭದಾ0ು ಅಧಿಕವಾಗುತ್ತದೆ. ಭಾರತದಲ್ಲಿ ಕೃಷಿ ಉತ್ಪಾದನೆ ಕಡಿಮೆ ಎನ್ನುವುದಕ್ಕೆ ಕೋಷ್ಟಕ 3.1 ಸಮರ್ಥನೆ ನೀಡುತ್ತದೆ.

ತುಲನಾತ್ಮಕ ಕೃಷಿ ಉತ್ಪಾದಕತೆ 2001–02

ಬೆಳೆ	ದೇಶ	ಪ್ರತಿ ಹೆಕ್ಟೇರ್ ಉತ್ಪಾದಕತೆ ಕಿಲೋ.ಗಳಲ್ಲಿ
ಭತ್ತ	ಭಾರತ	2090
	ಜಪಾನ್	4600
	ಚೀನಾ	6000
ಗೋಧಿ	ಭಾರತ	2770
	ಫ್ರಾನ್ಸ್	7000
	ಇಂಗ್ಲೇಂಡ್	7250
ಹತ್ತಿ	ಭಾರತ ಅಮೇರಿಕಾ	200
	ರಷ್ಯಾ	700
	ಆಸ್ಟ್ರೇಲಿ0ುಾ	1100
		1600


ಆಧಾರ: ದತ್ ಮತ್ತು ಸುಂದರಂ 2005. ಕೋಷ್ಟಕ 3.1

ಕೋಷ್ಟಕ 3.1 ಆಧಾರದಲ್ಲಿ ಈ ತೀರ್ಮಾನಗಳಿಗೆ ಬರಬಹುದು.

1. ಭಾರತವು ಸಾಂಪ್ರದಾಯಿಕ ಕೃಷಿ ಪ್ರಧಾನ ರಾಷ್ಟ್ರ ಆದರೆ ಪ್ರತಿ ಹೆಕ್ಟೇರು ಭತ್ತದ ಉತ್ಪಾದನೆ ಜಪಾನಿನಲ್ಲಿ ನಮ್ಮದಕ್ಕಿಂತ ಶೇ. 120 ರಷ್ಟು ಅಧಿಕ, ಚೀನಾದಲ್ಲಿ ಶೇ.190 ರಷ್ಟು ಅಧಿಕ.
2. ಗೋಧಿ ಬೆಳೆಯುಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಂತಹ ಪುಟ್ಟ ದೇಶಗಳು ಸುಮಾರು ಎರಡೂವರೆ ಪಟ್ಟು ಅಧಿಕ ಉತ್ಪಾದಕತೆ ಹೊಂದಿದೆ.
3. ಭಾರತವು ಹತ್ತಿ ಬಟ್ಟೆ ಉತ್ಪಾದನೆಯುಲ್ಲಿ ವಿಶ್ವದಲ್ಲಿ ಪ್ರಥಮ ಸ್ಥಾನವಲ್ಲಿದೆ. ಆದರೆ ಹತ್ತಿಯು ಉತ್ಪಾದಕತೆಯುಲ್ಲಿ ಬಹಳ ಹಿಂದಿದೆ. ಹತ್ತಿಯು ಬೆಳೆಯುಲ್ಲಿ ಅಮೇರಿಕಾವು ಭಾರತಕ್ಕಿಂತ ಮೂರುವರೆ ಪಟ್ಟು ರಷ್ಯಾವು ಐದುವರೆ ಪಟ್ಟು ಮತ್ತು ಆಸ್ಟ್ರೇಲಿಯುವು ಎಂಟೂವರೆ ಪಟ್ಟು ಅಧಿಕ ಉತ್ಪಾದಕತೆಯುನ್ನು ಹೊಂದಿದೆ.

ಕೃಷಿ ಉತ್ಪಾದಕತೆ ಕಡಿಮೆಯಿರಲು ಕಾರಣಗಳೇನು?

ಭಾರತದಲ್ಲಿ ಕೃಷಿ ಉತ್ಪಾದಕತೆ ಕಡಿಮೆಯಿರಲು ಅನೇಕ ಅಂಶಗಳು ಕಾರಣವಾಗಿವೆ. ಅವುಗಳನ್ನು ಸ್ಥೂಲವಾಗಿ ಹೀಗೆ ತೋರಿಸಬಹುದು



ನಕ್ಷೆ: ಕೃಷಿಯು ಕಡಿಮೆ ಉತ್ಪಾದಕತೆಗೆ ಕಾರಣಗಳು

1. ಸಾರ್ವತ್ರಿಕ ಕಾರಣಗಳು :

ಕೃಷಿ ಉತ್ಪಾದಕತೆ ಕಡಿಮೆಯಿರಲು ಈ ಕೆಳಗಿನ ಸಾರ್ವತ್ರಿಕ ಅಂಶಗಳು ಕಡಿಮೆ೦ಯಾಗಿವೆ.

1. ***ಅಧಿಕ ಅವಲಂಬನೆ:*** ಭಾರತದಲ್ಲಿ ಕೃಷಿ ಉತ್ಪಾದಕತೆ ಕಡಿಮೆಯಿರಲು ಇದು ಬಹಳ ಮುಖ್ಯವಾದ ಕಾರಣವಾಗಿದೆ. ಬಹಳ ಹಿಂದಿನಿಂದಲೂ ಕೃಷಿ೦ಯನ್ನು ಅವಲಂಬಿಸಿರುವ ಭಾರತೀ೦ಯರ ಪ್ರಮಾಣ ಸುಮಾರು ಶೇ.70ರಷ್ಟಿತ್ತು. ಈಗಲೂ ಒಟ್ಟು ಜನಸಂಖ್ಯೆ೦ಯಲ್ಲಿ ಅರ್ಧಾಂಶಕ್ಕಿಂತಲೂ ಅಧಿಕ ಮಂದಿ ಕೃಷಿ೦ಯನ್ನು ಅವಲಂಬಿಸಿದ್ದಾರೆ. ಭಾರತದಲ್ಲಿ ಪ್ರತಿವರ್ಷ ಎರಡು ಕೋಟಿಗಳಷ್ಟು ಮಕ್ಕಳು ಹುಟ್ಟುತ್ತಾರೆ. ಜನಸಂಖ್ಯೆಗೆ ಹೊಸ ಸೇರ್ಪಡೆ೦ಯಾದಂತೆಲ್ಲಾ ಕೃಷಿ೦ಯ ಮೇಲಣ ಒತ್ತಡ ಅಧಿಕವಾಗುತ್ತಾ ಹೋಗುತ್ತದೆ. ಕೃಷಿ೦ಯ ಭೂಮಿ೦ಯ ಸರಾಸರಿ ಗಾತ್ರ 0.43 ಹೆಕ್ಟೇರುಗಳಿಷ್ಟಿದ್ದದ್ದು 2001ರಲ್ಲಿ 0.20 ಹೆಕ್ಟೇರಿಗೆ ಕುಸಿದಿದೆ. ಆದುದರಿಂದ ಕೃಷಿ ಭೂಮಿ೦ಯ ಉತ್ಪಾದಕತೆ ಕಡಿಮೆ೦ಯಾಗಿದೆ. ಜನಸಂಖ್ಯೆ೦ಯನ್ನು ನಿ೦ಯಂತ್ರಿಸದೆ ಮತ್ತು ಕೃಷಿ೦ಯ ಮೇಲಣ ಅವಲಂಬನೆ೦ಯನ್ನು ಕಡಿಮೆ ಮಾಡದೆ ಕೃಷಿ ಉತ್ಪಾದಕತೆ ಹೆಚ್ಚಿಸಲು ಸಾಧ್ಯವಿಲ್ಲ.

2. ***ಗ್ರಾಮೀಣ ವಾತಾವರಣ:*** ಭಾರತದ ಗ್ರಾಮೀಣ ಪ್ರದೇಶಗಳಲ್ಲಿರುವ ಅಜ್ಞಾನ ಅನಕ್ಷರತೆ, ಜಡತನ, ಮೂಡನಂಬಿಕೆ ಮತ್ತು ಜಾತಿ ಪದ್ಧತಿಗಳು ಅನೇಕ ಅನಾಹುತಗಳಿಗೆ ಕಾರಣಗಳಾಗಿವೆ ಕರ್ಮ, ಗ್ರಹಚಾರ, ಹಣೆ೦ಯ ಬರಹ, ರಾಹು ಕಾಲ, ಗುಳಿಗೆಕಾಲ, ಭರಣಿ, ಕೃತಿಕ ವಾಸ್ತು, ಅಷ್ಟಮಂಗಲ ಪ್ರಶ್ನೆ ಇತ್ಯಾದಿಗಳ ಮೇಲಣ ನಂಬಿಕೆಗಳು ಭಾರತೀ೦ಯ ರೈತರಲ್ಲಿ ಸಾಹಸ ಪ್ರವೃತಿ ಇಲ್ಲದಂತೆ ಮಾಡಿವೆ. ಬಿಮಾರು (ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ) ರಾಜ್ಯಗಳಲ್ಲಿ ಪರಿಸ್ಥಿತಿ ಭ೦ಯಾನಕವಾಗಿ೦ಯೂ, ಶೋಚನೀ೦ಯವಾಗಿ೦ಯೂ ಇದೆ. (ಪ್ರೊ! ಆಶೀಷ್ ಭೋಸ್ ಬಿಮಾರು ಪದದ ಕರ್ತೃ) ಇವು ಕೃಷಿ ಉತ್ಪಾದಕತೆ೦ಯಲ್ಲಿ ಕಡಿಮೆ ಮಾಡಿವೆ. ಜನರಿಗೆ ವೈಜ್ಞಾನಿಕ ಶಿಕ್ಷಣ ನೀಡಿ ವೈಚಾರಿಕ ಪ್ರಜ್ಞೆ ಬೆಳಸಿ ಮಾನವ ಕುಲವೊಂದೇ ಕಾಲದಲ್ಲಿ ಕೆಟ್ಟ ಮತ್ತು ಒಳ್ಳೆ೦ಯ ಕಾಲ ಎಂಬುದಿರಲು ಸಾಧ್ಯವಿಲ್ಲ. ದೇವರು ಮತ್ತು ಭೂತಗಳು ೦ಯಾರ ಮೇಲು ಮುನಿ೦ಯುವುದಿಲ್ಲಾ; ಅವುಗಳನ್ನು ಸಂಪ್ರೀತಿಗೊಳಿಸಲು ಪೂಜೆ, ೦ಯಾಗ, ಬಳಿ, ಧಾನ್ಯಗಳ ಅಗತ್ಯವಿರುವುದಿಲ್ಲ. ಸರಿ೦ಯಾಗಿ ಗಾಳಿ ಬೆಳಕು ಆಡುವ ರೀತಿ೦ಯಲ್ಲಿ ಕಟ್ಟಡಗಳಿರಬೇಕೇ ಹೊರತು ವಾಸ್ತು ಶಾಸ್ತ್ರಕ್ಕನುಗುಣವಾಗಿ ಅಲ್ಲ. ಸದಾದುಡಿ೦ಯುವವನನ್ನು ವಿಧಿ ಅಥವಾ ಕರ್ಮ ಫಲ ಬಾಧಿಸುವುದಿಲ್ಲ ಎಂಬ ಶಾಶ್ವತ ಸತ್ಯವನ್ನು ತಿಳಿಸುವ ಶಿಕ್ಷಣ ಎಲ್ಲರಿಗೂ ಲಭ್ಯವಾದರೆ ಗ್ರಾಮೀಣ ವಾತಾವರಣ ಬದಲಾಗುತ್ತದೆ. ಉತ್ಪಾದಕತೆ ಹೆಚ್ಚಾಗುತ್ತದೆ.

3. ***ಸೇವೆಗಳ ಕೊರತೆ:*** ಗ್ರಾಮೀಣ ಕೃಷಿ ಕ್ಷೇತ್ರವು ಅನೇಕ ಸೇವೆಗಳಿದ್ದು ವಂಚಿತವಾಗಿದೆ. ಉತ್ಪನ್ನಗಳನ್ನು ಸಾಗಿಸಲು ಸರಿ೦ಯಾದ ರಸ್ತೆಗಳಿರುವುದಿಲ್ಲ, ರಸ್ತೆಗಳಿರುವಲ್ಲಿ ವಾಹನಗಳ ಕೊರತೆಯಿರುತ್ತದೆ. ಕೃಷಿಕರಿಗೆ ಸಾಮೂಹಿಕ ಸಾಲ ಒದಗಿಸುವ ಸಮಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಕಡಿಮೆಯಿರುತ್ತದೆ. ಕೃಷಿ

ಉತ್ಪನ್ನ ಮಾರಾಟ ವ್ಯವಸ್ಥೆ ಏನೇನೂ ಚೆನ್ನಾಗಿಲ್ಲ. ಈ ಅಂಶಗಳು ಉತ್ಪಾದನೆ0ು ಹೆಚ್ಚಳವನ್ನು ನೀರುತ್ತೇಜಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಸೇವಾಲಭ್ಯತೆ0ುನ್ನು ಹೆಚ್ಚಿಸಿದರೆ ಉತ್ಪಾದಕತೆ0ುನ್ನು ಹೆಚ್ಚಿಸಬಹುದು.

ಕೈಗಾರಿಕೆಗೆ ಪೂರ್ವಕವಾಗಿ ಕೃಷಿ:

ಕೃಷಿ0ು ಭಾರತದಂತಹ ದೇಶದಲ್ಲಿ ಒಂದು ಮಹತ್ವದಾ0ುಕ ಕೈಗಾರಿಕೆ0ಾಗಿ ಕಾ0ುರ್ನಿರ್ವಹಿಸುತ್ತಿದೆ. ಈ ವಿಷ0ುದಲ್ಲಿ.

1. 70% ದಷ್ಟು ಜನಸಂಖ್ಯೆ0ು ಕೃಷಿ0ುನ್ನು ಪ್ರಮುಖ ಜೀವನಾಧರವಾಗಿಟ್ಟುಕೊಂಡಿವೆ.
2. ಸುಮಾರು 186 ಮಿಲಿ0ುನ್‌ನಷ್ಟು ಜನಸಂಖ್ಯೆಗೆ ಕೃಷಿ0ು ಉದ್ಯೋಗವನ್ನು ಒದಗಿಸುತ್ತಿದೆ.
3. ಕೃಷಿ0ು ಸುಮಾರು ೪ ನೇ0ು ಭಾಗದಷ್ಟು ರಾಷ್ಟ್ರೀ0ು ನಿವ್ವಳ ಉತ್ಪನ್ನವನ್ನು ನೀಡುತ್ತಿದೆ. [15]

ಈ ಮೇಲ್ಕಂಡಂತೆ ಕೃಷಿ0ು ಒಂದು ಜೀವನಾಧಾರವಲ0ುವೆಂದು ಪರಿಗಣಿಸಬಹುದಾಗಿದೆ. ಭಾರತದಲ್ಲಿ ಕಂಡುಬರುವ ಭೂಮಿ0ು ಪರಿಪೂರ್ಣವಾಗಿ ಫಲವತ್ತತೆಯಿಂದ ಕೂಡಿವೆ ಎಂಬುದು ಅದು ಉತ್ಪಾದಿಸುತ್ತಿರುವ ಉತ್ಪನ್ನಗಳ ಮೂಲಕ ತಿಳಿದು ಬರುತ್ತದೆ. ಈ ದಿಸೆ0ುಲ್ಲಿ ಪ್ರತಿ ಹೆಕ್ಟೇರ್ ಭೂಮಿ0ು ಉತ್ಪಾದಿಸುತ್ತಿರುವ ಪ್ರಮುಖ ಬೆಳೆಗಳನ್ನು ಈ ಕೆಳಕಂಡಂತೆ ನಮೂದಿಸಬಹುದಾಗಿದೆ.

ಪ್ರತಿ ಹೆಕ್ಟೇರ್‌ನಲ್ಲಿ ಪ್ರಮುಖ ಬೆಳೆಗಳನ್ನು ಬೆಳೆಯುವಲ್ಲಿ ಹೊಂದಿರುವ ಸಾಮರ್ಥ್ಯ:

ಬೆಳೆಗಳ ಹೆಸರು	1970–91	1990–91	2000–01	2003–04
ಆಹಾರ ಧಾನ್ಯಗಳು	8.72	13.80	16.26	17.07
ಒರಟು ಏಕದಳ ದಾನ್ಯಗಳು	9.49	15.71	18.44	19.72
ದ್ವಿದಳ ಧಾನ್ಯಗಳು	5.24	5.78	5.44	6.23
ಅಕ್ಕಿ	11.23	17.40	19.01	20.51
ಗೋಧಿ	13.07	22.81	27.08	27.07
ಎಣ್ಣೆಕಾಳುಗಳು	5.79	7.71	8.10	10.72
ಕಬ್ಬು	480	650	690	590

ಆಧಾರ: ಇಕಾನಾಮಿಕ್ ಸರ್ವೆ 2004–05

ಕೋಷ್ಟಕ: 3.2

3.6 ಅಭಿವೃದ್ಧಿಯಲ್ಲಿ ಕೃಷಿಯ ಪಾತ್ರ:

"ಕೃಷಿಯು ರಾಷ್ಟ್ರೀಯ ಆದಾಯಕ್ಕೆ ಮಹತ್ತರವಾದಂತಹ ಕೊಡುಗೆಯನ್ನು ನೀಡುತ್ತಿದೆ. ರಾಷ್ಟ್ರೀಯ ಉದ್ಯೋಗ ಖಾತರಿ ಹಾಗೂ ರಾಷ್ಟ್ರೀಯ ಆದಾಯದ ಪ್ರಮುಖ ಮೂಲಕವಾಗಿ ಗುರುತಿಸಬಹುದಾಗಿದೆ. [16]

ಕೃಷಿಯು ಕೈಗಾರಿಕೆಗಳ ಜೀವಾಳವಾಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ಕೈಗಾರಿಕೆಯು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿದೆ ಎಂಬುದನ್ನು ಈ ಮೂಲಕ ಸ್ಪಷ್ಟೀಕರಿಸಬಹುದಾಗಿದೆ. 'ಕೃಷಿಯು ತಾನು ಉತ್ಪಾದಿಸಿದಂತಹ ಕಚ್ಚಾ ಸಾಮಾಗ್ರಿಗಳ ಕೈಗಾರಿಕೆಗೆ ನೀಡುವ ಕೈಗಾರಿಕೆಯು ಪ್ರಮುಖವಾಗಿ ಕೃಷಿಯನ್ನು ಅವಲಂಬಿಸಿಕೊಂಡಿದೆ.[17]

ಇಡೀ ತರಹನಾಗಿ "ರಾಷ್ಟ್ರಮಟ್ಟದಲ್ಲಿ ನಿರುದ್ಯೋಗದ ಸಮಸ್ಯೆಯನ್ನು ಕಡಿಮೆ ಮಾಡಲು ಕೇವಲ ಕೈಗಾರೀಕರಣದಿಂದ ಸಾಧ್ಯವಿಲ್ಲ. ಈ ನೆಲೆಯಲ್ಲಿ, ಕೃಷಿಯು ಕೈಗಾರಿಕೆಯ ಬೆಳೆಯಾಗಿ ಅಗೋಚರ ಶಕ್ತಿಯಾಗಿ ಕಾರ್ಯನಿರ್ವಹಿಸಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತದೆ. [18]

ಇಡೀ ರೀತಿಯಾಗಿ "ಈ ವಲಯವು ವಲಸೆ ಬರುವಿಕೆ ಹಾಗೂ ಸಾಂಪ್ರದಾಯಿಕ ಆಚರಣೆಗಳನ್ನು ಗೋಚರದಲ್ಲಿಡುತ್ತದೆ. ಇಲ್ಲಿ ಕೃಷಿವಲಯವು ನಗರೀಕರಣ ಹಾಗೂ ಸಾಂಪ್ರದಾಯಿಕ ಮೌಲ್ಯಗಳನ್ನು ತಡೆಯುವಲ್ಲಿ ಕಾರ್ಯನಿರ್ವಹಿಸುತ್ತದೆ. [19]

ಭೂ ಹಿಡುವಳಿಗಾರರು:

ಇದೇ ರೀತಿಯಲ್ಲಿ ಗಮನಿಸಿದಾಗ ರೈತಾಪಿ ಜನರು ಹೊಂದಿರುವಂತಹ ಸಾಗುವಳಿಯ ಪ್ರಮಾಣವನ್ನು ಗಮನಿಸಬಹುದಾಗಿದೆ. ಈ ಕೆಳಗೆ ನಮೂದಿಸಿದ ಕೋಷ್ಟಕದ ಮೂಲಕ ಪ್ರಪಂಚದಲ್ಲಿರುವ ಸಾಗುವಳಿ ಪ್ರಮಾಣ ಹಾಗೂ ಕೃಷಿಯನ್ನು ಹೊಂದಿಕೊಂಡಿರುವ ಜನರನ್ನು ಗಮನಿಸುವುದು.

ದೇಶ	ಸಾಗುವಳಿಯ ಸರಾಸರಿ ಪ್ರಮಾಣ	ಕೃಷಿಗೆ ಹೊಂದಿಕೊಂಡಿರುವ ಶೇಕಡಾವಾರು ಜನರು	ಇಲ್ಲದವರ ಸಾಗುವಳಿ
ಭಾರತ	2.63	70	40
ಯು.ಎಸ್.ಎ	37.28	12	5.11
ಅಸ್ಟ್ರೇಲಿಯಾ	41.33	24	7.32

ಆಧಾರ: (ಸಚದೇವ: ಇಕಾನಾಮಿಕ್ಸ್ ಆಫ್ ಅಗ್ರಿಕಲ್ಚರ್ (1978) ಸಾಧಾ ಪಬ್ಲಿಕೇಶನ್ಸ್, ನ್ಯೂಡೆಲ್ಲಿ)

ಕೋಷ್ಟಕ: 3.3

ಭೂ ಹಿಡುವಳಿ0ು ಪ್ರಮಾಣವನ್ನು ನಮ್ಮ ದೇಶದ ವಿವಿಧ ರಾಜ್ಯಗಳಲ್ಲಿ ಗಮನಿಸಿದರೂ ಶುರುವಾಗುವುದು 0.70 ಹೆಕ್ಟೇರುಗಳಿಂದ (1 ಹೆಕ್ಟೇರ್ = 2.47 ಎಕರೆ) ಕೇರಳದಲ್ಲಿ, 1.16 ಹೆಕ್ಟೇರ್, ಪಶ್ಚಿಮ ಬಂಗಾಳ 1.20, ತಮಿಳುನಾಡು 1.49, 2.89- ಪಂಜಾಬ್ 4.00 ಮಧ್ಯ ಪ್ರದೇಶ ಹಾಗೂ ರಾಜಸ್ಥಾನದಲ್ಲಿ 5.46 ಇವನ್ನು ಸರಾಸರಿಯಿಂದ ಇತ್ತೀಚಿನ ಕೃಷಿ ಅಂಶಗಳಿಂವ ತೆಗೆದುಕೊಳ್ಳಲಾಗಿದೆ ಸರಾಸರಿ0ುಾಗಿ ಭಾರತದಲ್ಲಿ 2.30 ಹೆಕ್ಟೇರನ್ನು ಭೂಹಿಡುವಳಿ0ು ಪ್ರಮಾಣವನ್ನು ಗುರುತಿಸಬಹುದಾಗಿದೆ.

ಇದನ್ನು ಪ್ರಾಪಂಚಿಕವಾಗಿ ತುಲಾನಾತ್ಮಕ ದೃಷ್ಟಿ0ುಲ್ಲಿ ಹೋಲಿಸಿದಾಗ, ಭಾರತ್ದಲ್ಲಿ 2.30 ಹೆಕ್ಟೇರ್, ಬೆಲ್ಜಿ0ುಂ- 8.4 ಹೆಕ್ಟೇರ್, 0ು.ಕೆ- 40.6, 0ು.ಎಸ್.ಎ-122.5, ಆಸ್ಟ್ರೇಲಿ0ುಾ 184.2, 16ನೇ ಹಾಗೂ 17ನೇ ಶತಮಾನಕ್ಕೆ ಹೋಲಿಸಿದಾಗ ಈಗ ವ್ಯತ್ಯಾಸ ತುಂಬಾ ದೊಡ್ಡದು.

(ದತ್ ಮತ್ತು ಸುಂದರಂ, ಇಂಡಿಯನ್ ಇಕಾನಾಮಿ (2004) ಎಸ್.ಚಂದ್ ಮತ್ತು ಕಂಪೆನಿ)

3.8 ಕೃಷಿ0ುುತ್ಪನ್ನ ಮಾರಾಟ ವ್ಯವಸ್ಥೆ:

ಇಪ್ಪತ್ತನೆ0ು ಆದಿ0ುವರೆಗೂ ಭಾರತದಲ್ಲಿ ಕೃಷಿ0ುು ಜೀವನಾಧಾರ ಹಂತದಲ್ಲೇ ನಡೆಸಲ್ಪಡುತ್ತಿತ್ತು. ತಮಗೆ ಬೇಕಾದಷ್ಟನ್ನು ಮಾತ್ರ ಕೃಷಿಕರು ಉತ್ಪಾದಿಸುತ್ತಿದ್ದರು. ಹೆಚ್ಚು ಬೆಳೆದರೆ ಬೇರೆ ಉತ್ಪನ್ನಗಳೊಡನೆ ಅದಲು ಬದಲು ಮಾಡಿಕೊಳ್ಳುತ್ತಿದ್ದರು, ಸ್ವಲ್ಪ ಭಾಗವನ್ನು ಗೇಣಿ ಪಾವತಿಗಾಗಿ, ಸಾಲ ನೇರಸಲಿಕ್ಕಾಗಿ ಮತ್ತು ಇತರ ಖರ್ಚುಗಳಿಗಾಗಿ ಮಾರಾಟ ಮಾಡಲಾಗುತ್ತಿತ್ತು. ಆದುದರಿಂದ ಕೃಷಿ ಉತ್ಪನ್ನಗಳ ಮಾರಾಟ ಸಮಸ್ಯಾತ್ಮಕವಾಗಿರಲಿಲ್ಲ. ಕೃಷಿ ಕ್ರಾಂತಿ0ು ಬಳಿಕ ಭಾರತದ ಕೃಷಿಗೆ ನೂತನ ಆ0ುಾಮವೊಂದು ದೊರೆತು. ಕೃಷಿ0ುು ವಾಣಿಜ್ಯಮ0ುವಾಗಿ ಪರಿವರ್ತನೆ0ುಾಯಿತು. ಆರ್ಥಿಕ ಬೆಳೆಗಳಿಂದ ಚಹಾ, ಅಕ್ಕಿ, ತೆಂಗು, ಅಡಿಕೆ, ರಬ್ಬರು, ಸೆಣಬು, ಹತ್ತಿ, ಕಬ್ಬು ಮತ್ತು ಸಾಂಬಾರ ಜಿನಸುಗಳು ಆರ್ಥಿಕ ಪ್ರಮಾಣದಲ್ಲಿ ಬೆಳೆ0ುಾರಂಭವಾದಂದಿನಿಂದ ಕೃಷಿ ಉತ್ಪನ್ನಗಳ ಮಾರಾಟ ಈಗ ಅಸ್ತಿತ್ವದಲ್ಲಿರುವ ಭಾರತದ ಕೃಷಿ ಮಾರುಕಟ್ಟೆ ವ್ಯವಸ್ಥೆ ಹೀಗಿದೆ. [20]

1. <u>ಗ್ರಾಮೀಣ ವ್ಯಾಪಾರಿಗಳು:</u> ಗ್ರಾಮೀಣ ವ್ಯಾಪಾರಿಗಳಿಗೆ ಮತ್ತು ಸಾಲ ನೀಡುವವರಿಗೆ ತಮ್ಮ ಉತ್ಪನ್ನದಲ್ಲಿ ಬಹುಪಾಲನ್ನು ರೈತರು ಮಾರಾಟ ಮಾಡುತ್ತಾರೆ. ಹೆಚ್ಚಿನ ರೈತರು ಗ್ರಾಮೀಣ ಋಣಭಾರದಿಂದಾಗಿ ತಾವು ಸಾಲ ತೆಗೆದುಕೊಂಡಿರುವವರಿಗೇ ತಮ್ಮ ಉತ್ಪನವನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ ಗ್ರಾಮೀಣ ಸಾಲದಾತರು ಹೆಚ್ಚಾಗಿ ರಖಂ ವ್ಯಾಪಾರಿಗಳಿಗೆ ಏಜೆಂಟರಾಗಿ ಕಾ0ುರ್ೋನ್ಮುಖರಾಗಿರುತ್ತಾರೆ.

2. **<u>ಸಂತೆಗಳು:</u>** ವಾರಕ್ಕೊಮ್ಮೆ ನಡೆಯುವ ಹಳ್ಳಿಯ ಸಂತೆಗಳಲ್ಲಿ ರೈತರು ತಮ್ಮ ಉತ್ಪನ್ನಗಳ ಮಾರಾಟ ಮಾಡುತ್ತಾರೆ ತಮಗೆ ಬೇಕಾದ ಸಲಕರಣೆಗಳನ್ನು ಕೂಡ ಇಂತಹ ಸಂತೆಗಳಿಂದಲೇ ಕೊಳ್ಳುತ್ತಿರುತ್ತಾರೆ. ಆದರೆ ಹಳ್ಳಿಯ ಸಂತೆಗಳು ಮತ್ತು ಮಾರುಕಟ್ಟೆಗಳು ಆಧುನಿಕ ಸಲಕರಣೆಗಳಿಂತ ಸಜ್ಜಾಗಿರುವುದಿಲ್ಲ. ಸರಿಯಾದ ರಸ್ತೆ ಸಂಪರ್ಕ ಇಲ್ಲದ ಹಳ್ಳಿಯ ಸಂತೆಗಳು ಸಾಕಷ್ಟಿವೆ ಸಾಗಾಟ ವ್ಯವಸ್ಥೆ ಮಾಡಲಾಗದ ಸಣ್ಣ ಮತ್ತು ಮಧ್ಯಮ ರೈತರು ಅನಿವಾರ್ಯವಾಗಿ ಇಂತಹ ಸಂತೆಗಳಲ್ಲಿ ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾಡಬೇಕಾಗುತ್ತದೆ.

3. **<u>ಮಡಿಗಳು ಅಥವಾ ರಖಂ ಮಾರುಕಟ್ಟೆಗಳು</u>:-** ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿರುವ ಮಂಡಿಗಳಲ್ಲಿ ತಮ್ಮ ಉತ್ಪನ್ನವನ್ನು ರೈತರು ಮಾರುತ್ತಾರೆ ಅಲ್ಲದೆ ಮಂಡಿಗಳು ನಗರ ಪ್ರದೇಶವಲ್ಲಿಮು ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಅಲ್ಲಿಗೆ ಸಾಗಿಸುವುದು, ಬಹುತೇಕವಾಗಿ ಸಾಧ್ಯವಿಲ್ಲದ ಮಾತಾಗಿದೆ.

4. **<u>ಸಹಕಾರಿ ಮಾರುಕಟ್ಟೆಯ ವ್ಯವಸ್ಥೆ:</u>** ರೈತರೇ ಜೊತೆ ಸೇರಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ತಮ್ಮ ಕೃಷಿ ಉತ್ಪನ್ನಗಳ ಮಾರಾಟ ನಡೆಸುತ್ತಾರೆ. ರೈತರ ಶೋಷಣೆಯನ್ನು ಇಂತಹ ವ್ಯವಸ್ಥೆಯು ತಪ್ಪಿಸುವುದಲ್ಲದೆ ಸಾಕಷ್ಟು ಲಾಭವನ್ನು ಕೂಡ ತಂದು ಕೊಡುತ್ತದೆ. ಆದರೆ ಭಾರತದಲ್ಲಿ ಸಹಕಾರಿ ಪದ್ಧತಿ ಯಶಸ್ವಿಯಾಗಿಲ್ಲ. ರೈತರ ಅನಕ್ಷರತೆ ಮತ್ತು ಅಜ್ಞಾನಗಳಿಂದಾಗಿ ಶೋಷಕ ವರ್ತಕರ ಮೋಸದ ಬಲೆಯಿಂದ ಹೊರಬರಲು ರೈತರಿಗೆ ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಆದುದರಿಂದ ರೈತರ ಉತ್ಪನ್ನಕ್ಕೆ ಸರಿಯಾದ ಬೆಲೆ ದೊರೆಯುತ್ತಿಲ್ಲ.[21]

<u>ಆಕರ ಗ್ರಂಥಗಳು</u>

---

[1] ಗುಪ್ತ ವಿ.ಎಸ್. ಮತ್ತು ಅಗರ್‌ವಾಲ್, ವೀರಬಾಲ (1996), ಮೀಡಿಯಾ ಪಾಲಿಸಿ ಆಂಡ್ ನೇಷನ್ ಬಿಲ್ಡಿಂಗ್, ಸೆಲೆಕ್ಟೆಡ್ ಇಸ್ಸ್ಯೂಸ್ ಆಂಡ್ ಥೀಮ್ಸ್ ನವದೆಹಲಿ, ಇಚಿಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್.

[2] ಗುರು ಟಿ,.ಬಾಲ ಮತ್ತು ರಾಮನ್ ಕೆ.ವಿ.ಅಗ್ರಿಕಲ್ಚರಲ್ ರಿಸರ್ಚ್ ಸಿಸ್ಟಮ್ ಇನ್ ಇಂಡಿಯ ಇದರಲ್ಲಿ ಕೆ.ವಿ.ರಾಮನ್ ಎಂ.ಎಂ.ಅನ್ವರ್. ಆರ್.ಬಿ.ಗದಗೀ ಮಠ (1988) ಅಗ್ರಿಕಲ್ಚರಲ್ ರಿಸರ್ಚ್ ಸಿಸ್ಟಮ್ಸ್ ಅಂಡ್ ಮ್ಯಾನೇಜ್‌ಮೆಂಟ್ ಇನ್ ದ ಟ್ವೆಂಟಿಫಸ್ಟ್ ಸೆಂಚುರಿ, ಹೈದರಾಬಾದ್, ಎನ್.ಎ.ಎ.ಆರ್.ಎಂ.ಅಲುಮ್ನಿ ಅಸೋಸಿಯೇಶನ್.

[3] ಛಾತ್ರ ಮದನ ಮೋಹನ್, (1978). ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ರೊಸೆಸ್ ಅಂಡ್ ಟೆಕ್ನಾಲಜಿ. ನವದೆಹಲಿ ಅಲೈಡ್ ಪಬ್ಲಿಶರ್ಸ್.

[4] ಇಂಡಿಯನ್ ಪಾರ್ಕಿಂಗ್ (2003, ಬೇಜಿಂಗ್, ಸಿನಾರಿಯೋ ಇನ್ ಅಗ್ರಿಕಲ್ಚರ್, ಚಾಲೆಂಜಸ್ ಆಹೆಡ 53 (2) 2.

[5] ಕನ್ನಾ ಎಸ್.ಎಸ್. ಮತ್ತು ಪವೆಲ್ ಎಂ.ವಿ.ಪರ್‌ಸ್ಪೆಕ್ಟೀವ್ಸ್ ಇನ್ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್. ಇದರಲ್ಲಿ

ಕೆ.ವಿ.ರಾಮನ, ಎಂ.ಎಂ.ಅನ್ವರ್, ಆರ್.ಬಿ.ಗದಗೀ ಮಠ (1988) ಅಗ್ರಿಕಲ್ಚರಲ್ ರಿಸರ್ಚ್ ಸಿಸ್ಟಮ್ಸ್ ಆಂಡ್ ಮ್ಯಾನೇಜ್‌ಮೆಂಟ್ ಇನ್ ದ ಟ್ವೆಂಟಿಫಸ್ಟ್ ಸೆಂಚುರಿ, ಹೈದರಾಬಾದ್, ಎನ್.ಎ.ಎ.ಆರ್.ಎಂ.ಅಲುಮ್ನಿ ಅಸೋಸಿ0ಯೇಶನ್.

ವಿರೇಶ್‌ಗೊಂದ್ದ (1971) ಆಧುನಿಕ ಬೇಸಾ0ಯ ಬೆಂಗಳೂರು; ಕರ್ನಾಟಕ ಸಾಹಿತ್ಯ ಪರಿಷತ್ತು.

[6] ಸಿಂಗ್, ಸುಬದೇವ್; ಅಗ್ರಿಕಲ್ಚರಲ್ 0ಯುನಿವರ್ಸಿಟಿ ಸಿಸ್ಟಮ್ ಇನ್ ಇಂಡಿ0ಯಾ ಇದರಲ್ಲಿ ಕೆ.ವಿ.ರಾಮನ್, ಎಂ.ಎಂ.ಅನ್ವರ್, ಆರ್.ಬಿ.ಗದಗೀ ಮಠ (1988) ಅಗ್ರಿಕಲ್ಚರಲ್ ರಿಸರ್ಚ್ ಸಿಸ್ಟಮ್ಸ್ ಆಂಡ್ ಮ್ಯಾನೇಜ್‌ಮೆಂಟ್ ಇನ್ ದ ಟ್ವೆಂಟಿಫಸ್ಟ್ ಸೆಂಚುರಿ, ಪೈವರಾಬಾದ್, ಎನ್.ಎ.ಎ.ಆರ್.ಎಂ.ಅಲುಮ್ನಿ ಅಸೋಸಿ0ಯೇಶನ್.

[7] ಕಾರ್ಲ್, ಮರವೋರಾಸ್ಕ; ಈಸ್ ಬ0ಯೋಟೆಕ್ನಾಲಜಿ ಆ್ಯನ್ ಆನ್ಸರ್ ಟು ಅವರ್ ಪೂಚರ್, ಇದರಲ್ಲಿ ಕೆ.ವಿ.ರಾಮನ್, ಎಂ.ಎಂ.ಅನ್ವರ್, ಆರ್.ಬಿ.ಗದಗೀ ಮಠ (1988) ಅಗ್ರಿಕಲ್ಚರಲ್ ರಿಸರ್ಚ್ ಸಿಸ್ಟಮ್ಸ್ ಅಂಡ್ ಮ್ಯಾನೇಜ್‌ಮೆಂಟ್ ಇನ್ ದ 21[st] ಸೆಂಚುರಿ, ಹೈದರಾಬಾದ್, ಎನ್.ಎ.ಎ.ಆರ್.ಎಂ.ಅಲುಮ್ನಿ ಅಸೋಸಿ0ಯೇಶನ್.

[8] ತಿವಾರಿ ಶಾಲೇಂದ್ರ ಎಸ್.ಕೆ.(2003) ಸಸ್ಟೈನಬಲ್ ಅಗ್ರಿಕಲ್ಚರ್: ದ ಪರಸೆಪ್ಷನ್ಸ್ ಆಂಡ್ ಪಾಲಿಸೀಸ್ ಪೈನಾನ್ಸಿಂಗ್ ಅಗ್ರಿಕಲ್ಚರ್ 53, (1), 2.

[9] ಶಿವವಂದನಾ (2003) ಶ್ಯಾವಿಂಗ್ ಅವರ ಕೇಕ್ ಅಂಡ್ ಈಟಿಂಗ್ ಟು ಪೈನಾನ್ಸಿಂಗ್ ಅಗ್ರಿಕಲ್ಚರ್.

[10] ಬ್ಯಾನರ್ಜಿ ಬಿ.ಎನ್. ಖಜಜುಣಜಿಭಿಚಿಣಹಿ ಂಟಜ ಇಭಿಥಚಿಥಿಖ ಂಟಿಚಿಟಥಿ ಆಜಿ ಟಚಿಟಟ ಜಿಞಟಟಿಣ ಓಜಿ ಆಜುಖ ಒಾಣಚಿಟ ಕಾಟಖಿಚಿಣಹಿ.

[11] ಅಡಿಕೆ ಪತ್ರಿಕೆ (2003) ನಿಜವಾದ ಹಸಿರು ಕ್ರಾಂತಿ 19 (7) 3.

[12] ಎಚ್.ಆರ್.ಕೃಷ್ಣ0ಯ್ಯ .ಗೌಡ– ಆರ್ಥ ಭಾಗತ.

[13] ಎಚ್.ಆರ್.ಕೃಷ್ಣ0ಯ್ಯ .ಗೌಡ– ಆರ್ಥ ಭಾಗತ.

[14] ಆರ್ಥಿಕ ಭಾಗತ –ಎಚ್.ಆರ್.ಕೃಷ್ಣ0ಯ್ಯ .ಗೌಡ

[15] ಇಕನಾಮಿಕ್ ಸರ್ವೆ 2004–05 ಗೌರವೆಂಟ್ ಆಫ್ ಇಂಡಿ0ಯಾ.

[16] ಸ್ವಾಮಿನಾಥನ್ ಎಮ್.ಎಸ್.ಸಸ್‌ಟೆನೆಬಲ್ ಅಗ್ರಿಕಲ್ಚರ್ ಟೂವರ್ಡ್ಸ್ ಆ0ಯ್ಯನ್ ಎವರ್‌ಗ್ರೀನ್ ರೆವ್ಯೋಲೇಶನ್ (1996) ಕೋನಾರ್ಕ್ ಪಬ್ಲಿಷರ್ಸ್ ನ್ಯೂಡೆಲ್ಲಿ.

[17] ಚೌಧರಿ ಪ್ರಿಮಿತ 'ದಿ ಇಂಡಿ0ಯನ್ ಇಕಾನಾಮಿ (1982) ವಿಕಾಸ್ ನ್ಯೂಡೆಲ್ಲಿ).

[18] ಇಕಾನಾಮಿಕ್ ಸರ್ವೆ 2004–05 ಗೌರಮೆಂಟ್ ಆಫ್ ಇಚಿಡಿ0ಯಾ.

[19] 0ಯುನೈಟೆಡ್ ನೇಷನ್ಸ್ 'ದಿ ವರ್ಲ್ಡ್ ಕಾಪ್ಯುಲೇಶನ ಗ್ರೋತ್ (1988) ಔಆಅಆ ಪ್ಯಾರಿಸ್

[20] ಆರ್ಥಿಕ ಭಾರತ –ಊ.ಖ ಕೃಷ್ಣ0ಯ್ಯ ಗೌಡ.

[21] ಆರ್ಥಿಕ ಭಾರತ –ಊ.ಖ ಕೃಷ್ಣ0ಯ್ಯ ಗೌಡ.

ಅಧ್ಯಾಯ- 4

ನಂಜನಗೂಡು ತಾಲೂಕಿನಲ್ಲಿ ತಂಬಾಕು ಬೆಳೆ

4.1 ಕ್ಷೇತ್ರ ಪರಿಚಯ

ನಂಜನಗೂಡು, ಸಮುದ್ರ ಮಟ್ಟದಿಂದ 800 ಮೀ ಎತ್ತರದಲ್ಲಿರುವ ಈ ಊರು ಅಕ್ಷಾಂಶ 12.7 ಡಿಗ್ರಿ ಪೂರ್ವ ರೇಖಾಂಶ 76.45ರಲ್ಲಿದ್ದು ಮೈಸೂರಿಗೆ 15 ಮೈಲು, ಚಾಮರಾಜನಗರಕ್ಕೆ 30 ಮೈಲು, ಗುಂಡ್ಲುಪೇಟೆಗೆ 28 ಮೈಲು, ದೂರದಲ್ಲಿ 4 ಊರಿಗೆ ಮಧ್ಯದಲ್ಲಿ ಕಪಿಲಾ ಕೌಂಡಿನಿ ನದಿಗಳ ದಡದಲ್ಲಿರುತ್ತದೆ. ಇದು ಪರಮ ಪವಿತ್ರ ಕ್ಷೇತ್ರವು ಕೃಷಿ ಕ್ಷೇತ್ರವು ಸಾಧು ಸತ್ಪುರುಷ ಕ್ಷೇತ್ರವು ಕೈಗಾರಿಕಾ ಕ್ಷೇತ್ರವು ಸಹ ಆಗಿರುತ್ತದೆ.

ಇದು ಪೂರ್ವದಲ್ಲಿ ದಂಡ ಕಾರಣ್ಯವಾಗಿದ್ದು, ನಂತರ ಶ್ರೀ ಕಂಠೇಶ್ವರ ಕೇಶಿ ರಾಕ್ಷಸನ ಸಂಹಾರ ಮಾಡಿ ಅವನ ದೇಹದಲ್ಲಿದ್ದ ವಿಷವು ಭೂಮಿಯಲ್ಲಿ ವ್ಯಾಪಿಸಿದ ಕಾರಣ ಗರಳಪುರಿ ಕ್ಷೇತ್ರವೆಂದು, ಪರಶುರಾಮರಿಂದ ಗೋಪ್ಯವಾಗಿದ್ದ ಶಿವಲಿಂಗವು ಭೂಲೋಕಕ್ಕೆ ಪ್ರಕಟವಾದ್ದರಿಂದ ಪರುಶರಾಮಕ್ಷೇತ್ರವೆಂತಲೂ ಗೌತಮರಿಗೆ ಇಂದ್ರ ಮತ್ತು ಅಹಲ್ಯೆಗೆ ಶಾಪ ಕೊಟ್ಟ ದೋಷಪರಿಹಾರಕ್ಕಾಗಿ ಶಿವನ ಅಪ್ಪಣೆಯ ಮೇಲೆ ಈ ಕ್ಷೇತ್ರದಲ್ಲಿ ಶಿವನ ಕುರಿತು ತಪಸ್ಸು ಮಾಡಿ ಶಿವನು ಪ್ರತ್ಯಕ್ಷನಾಗಿ ಮಹೋತ್ಸವ (ರಥೋತ್ಸವ)ವನ್ನು ಆಚರಿಸಲು ನಿರ್ದೇಶಿಸಿದ ಕಾರಣ ಇಲ್ಲಿ ಮೀನ ಮಾಸದಲ್ಲಿ ಉತ್ತರ ನಕ್ಷತ್ರದಲ್ಲಿ ರಥೋತ್ಸವವನ್ನು ಆಚರಿಸಿ ಶಿವಲಿಂಗವನ್ನು ಪೂಜೆ ಮಾಡುತ್ತಾ ಇರುವ ಕಾರಣ, ಗೌತಮ ಕ್ಷೇತ್ರವೆಂದು, ಕಪಿಲಾ ಮತ್ತು ಕೌಂಡಿನ್ಯ ನದಿಗಳು ಸಂಗಮವಾಗುವುದರಿಂದ ಸಂಗಮಕ್ಷೇತ್ರವೆಂದು ಈಗ ನಂಜಗುಡು ಎಂಬ ನಾಮಾಂಕಿತವಾದ ಜಗತ್ ಪ್ರಖ್ಯಾತಿಯನ್ನು ಹೊಂದಿದೆ. ಇಲ್ಲಿಯ ರಸಬಾಳೆ, ಬಿ.ವಿ.ಪಂಡಿತರ ಹಲ್ಲುಪುಡಿ, ಜಗತ್ ಪ್ರಸಿದ್ಧಿಯನ್ನು ಹೊಂದಿರುತ್ತದೆ. ಭತ್ತ, ರಾಗಿ, ಜೋಳ, ತರಕಾರಿ, ಕಬ್ಬು ಇತ್ಯಾದಿ ವ್ಯವಸಾಯವನ್ನು ಮಾಡುತ್ತಾರೆ. ಇಲ್ಲಿ ಹಲವಾರು ಕಾರ್ಖಾನೆ ಹೊಂದಿರುವ ಕಾರಣ ಕೈಗಾರಿಕಾ ಕ್ಷೇತ್ರವಾಗಿರುತ್ತದೆ.

ನಂಜನಗೂಡು ಪ್ರೇಕ್ಷಣೀಯ ಸ್ಥಳಗಳು:

ಪರಶುರಾಮಕ್ಷೇತ್ರ, ಕೆಂಡಗಣ್ಣ ಸ್ವಾಮಿ ಮಠ, ಶಂಕರಮಠ, ರಾಘವೇಂದ್ರಸ್ವಾಮಿಗಳ ಮಠ, ಲಿಂಗಾಭಟ್ಟರ ಕಾಶಿವಿಶ್ವನಾಥೇಶ್ವರ, ಸುಬ್ಬಾಭಟ್ಟರ ಸುಬ್ರಹ್ಮಣ್ಯೇಶ್ವರ, ರಾಮಲಿಂಗೇಶ್ವರ, ಚಾಮುಂಡೇಶ್ವರಿ, ಸತ್ಯನಾರಾಯಣ, ದತ್ತಾತ್ರೆಯ, ಅಯ್ಯಪ್ಪಸ್ವಾಮಿ, ಕಪಿಲಮಲ್ಲಿ ಕಾರ್ಜುನಸ್ವಾಮಿ, ಸಂಕಷ್ಟಹರ ಗಣಪತಿ ದೇವಸ್ಥಾನ, ಇಷ್ಟಾರ್ಥ ಸಿದ್ಧಿಗಣಪತಿ ದೇವಸ್ಥಾನ, ಮಹಾಕಾಳಿ, ಮಹಾಲಕ್ಷ್ಮಿ ದೇವಸ್ಥಾನ, ಮಲನಮೂಲೆ ಕಂಬಲೇಶ್ವರ ಮಠ, ಕನ್ನಿಕಾಪರಮೇಶ್ವರಿ ದೇವಸ್ಥಾನ. ಚಿಕ್ಕಯ್ಯನ ಛತ್ರದ ಶ್ರೀ ಪ್ರಸನ್ನ ನಂಜುಡೇಶ್ವರ ದೇವಾಲಯ. [1]

4.2 ಐತಿಹಾಸಿಕ ಪ್ರಸ್ತಾವನೆ:

0ಯದುರಾ0ಯ ಕೃಷ್ಣರಾ0ಯರು ದ್ವಾರಕಾನಗರ ಸಾಮ್ರಾಜ್ಯವನ್ನು ಕಳೆದುಕೊಂಡು ರಾಜ್ಯ ಭ್ರಷ್ಟರಾಗಿ ಮೈಸೂರಿಗೆ ಆಗಮಿಸಿ ಕೋಡಿ ಭೈರವ ಸನ್ನಿಧಿ0ಯಲ್ಲಿ ಮಲಗಿರುವಾಗ, ಶ್ರೀ ಚಾಮುಂಡೇಶ್ವರಿ0ಯು ಹೇಳಿದಂತೆ ಒಂದು ಸ್ವಪ್ನವುಂಟಾಯಿತು. ಸ್ವಪ್ನದಂತೆ ಶ್ರೀ ಕಂಠೇಶ್ವರನು ಸಾಧು ರೂಪದಿಂದ ಇವರನ್ನು ಕರೆದುಕೊಂಡು ಅರಮನೆಗೆ ಹೋಗಿ ಶತ್ರು ಸಂಹಾರ ಮಾಡಿಸಿ. ರಾಜಪುತ್ರಿ0ಯೊಡನೆ ವಿವಾಹ ಮಾಡಿಸಿ, ಮೈಸೂರು ರಾಜ್ಯದ ಒಡೆ0ಯರನ್ನಾಗಿ ಮಾಡಿರುವುದರಿಂದ ಅನಂತರ 0ಯದುವಂಶದವರು ಒಡೆ0ಯರೆಂಬ ಹೆಸರಿನಿಂದ ರಾಜ್ಯವಾಳುತ್ತಾ ಶ್ರೀ ಶ್ರೀ ಕಂಠೇಶ್ವರ ಸ್ವಾಮಿ0ಯವರನ್ನೂ ಮತ್ತು ಚಾಮುಂಡಾಂಬಿಕೆ0ಯನ್ನೂ ತಮ್ಮ ಮನೆದೇವರಾಗಿ ನಡೆಸಿಕೊಂಡು ಬರುವವರಾದರು.

ಮತ್ತೆ ಕೆಲವು ಇತಿಹಾಸತಜ್ಞರ ಪ್ರಕಾರ ದ್ವಾರಿಕೆಯಿಂದ ಬಂದಂತಹ 0ಯದುರಾ0ಯ ಕೃಷ್ಣರಾ0ಯ ಸಹೋದರರು ಚಂದ್ರವಂಶೀ0ಯರು 0ಯಾದವಕುಲಕೆ ಸೇರಿದವರು ಎನ್ನಲಾಗಿದೆ. ಈ ಸಹೋದರರು ತಮ್ಮ ಮನೆ ದೇವರಾದ ಮೇಲುಕೋಟೆ0ಯ ಚೆಲುವನಾರಾ0ಯಣಸ್ವಾಮಿ ದರ್ಶನ ಮಾಡಿದ ನಂತರ ಮಹಾಬಲಾದ್ರಿ (ಇಂದಿನ ಚಾಮುಂಡಿ ಬೆಟ್ಟ)ಗೆ ಬಂದು ಶ್ರೀ ಚಾಮುಂಡೇಶ್ವರಿ ದೇವಿ0ಯ ದರ್ಶನವನ್ನು ಪಡೆದು ನಂತರ ಮೈಸೂರಿನ ಕೋಡಿಭೈರವ ದೇವಾಲ0ಯದಲ್ಲಿ ವಿಶ್ರಾಂತಿ ಪಡೆ0ಯುತ್ತಿದ್ದರು. ಈ ಸಂದರ್ಭದಲ್ಲಿ ಮೈಸೂರು ಪ್ರದೇಶ ನಾ0ಯಕ ಚಾಮರಾಜ ಮರಣ ಹೊಂದಿರಲಾಗಿ, ಆತನ ವಿಧವೆ ರಾಣಿ ಹಾಗೂ ಮಗಳು ದೇವಾಜಮ್ಮಣ್ಣಿ0ಯವರ ಅಸಹಾ0ಯಕತೆ0ಯನ್ನು ಚಾಮರಾಜನ ದಳವಾಯಿ ಮಾರನಾ0ಯಕರು ದುರುಪ0ಯೋಗ ಮಾಡಿಕೊಳ್ಳಲು ಮುಂದಾಗಿದ್ದಾನೆಂಬ ವಿಚಾರ ಸಹೋದರಿಗೆ ತಿಳಿದು ಬಂದಿತು. ಮಾರನಾ0ಯಕನು ಚಾಮರಾಜನ ರಾಣಿ ಮತ್ತು ಮಗಳಿಂದ ಎಲ್ಲಾ ಅಧಿಕಾರವನ್ನು ಕಿತ್ತುಕೊಂಡು, ಮಗಳು ದೇವಾಜಮ್ಮಣ್ಣಿ0ಯನ್ನು ಬಲಾತ್ಕಾರವಾಗಿ ವಿವಾಹವಾಗಲು 0ಯತ್ನಿಸಿದನು. ಆ ಸಂದರ್ಭಕ್ಕೆ ಸರಿ0ಯಾಗಿ 'ಜಂಗಮ' (ಒಡೆ0ಯರ್) ನೊಬ್ಬನ ಸಹಕಾರ ದೊರತು 0ಯದುರಾ0ಯ ಕೃಷ್ಣರಾ0ಯ ಸಹೋದರರು ಮಾರನಾ0ಯಕನನ್ನು ಸಂಹರಿಸಿ ದಿವಂಗತ ಚಾಮರಾಜನ ರಾಣಿ ಮತ್ತು ಮಗಳನ್ನು ರಕ್ಷಿಸಿದರು. ಕೃತಜ್ಞತೆಯಿಂದ ರಾಣಿ0ಯು ತನ್ನ ಮಗಳನ್ನು 0ಯದುರಾಜನಿಗೆ ಕೊಟ್ಟು ವಿವಾಹ ಏರ್ಪಡಿಸಿದಳು ಹಾಗೂ ಮೈಸೂರು ಪ್ರದೇಶದ ನಾ0ಯಕತ್ವವನ್ನು ಅವನಿಗೆ ವಹಿಸಿದಳು. ತಮಗೆ ಸಹಾ0ಯ ಮಾಡಿದ "ಜಂಗಮನ' ನೆನಪಿಗಾಗಿ 'ಒಡೆ0ಯರ್' ಎಂಬ ಬಿರುದು ಹಾಕಿಕೊಂಡರು. ಹಾಗಾಗಿ0ಯೇ ಈ ಮನೆತನ ರಾಜರ ಹೆಸರಿನ ಮುಂದೆ 'ಒಡೆ0ಯರ್' ಬಿರುದು ಸೇರಿಕೊಂಡಿದೆ ಎಂಬುದಾಗಿ ಹೇಳಲಾಗಿದೆ.

ಅದೇನೆ ಇದ್ದರೂ ಆರಂಭದಿಂದಲೂ ಮೈಸೂರಿನ ಒಡೆ0ಯರ್ ಮನೆತನದವರು ನಂಜನಗೂಡು ಶ್ರೀಕಂಠೇಶ್ವರ, ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಿಗೆ ಭಕ್ತರೆನಿಸಿದರು. ಒಡೆ0ಯರ ಮನೆತನದವರು


ಈ ದೇವಾಲಯಕ್ಕೆ ನೀಡಿರುವ ಗಣನೀಯ ಕೊಡಿಗೆಗಳಿಗೆ ಸಂಬಂಧಿಸಿದಂತೆ ಸಮಕಾಲೀನ ಶಾಸನಾಧಾರಗಳೂ, ಸಾಹಿತ್ಯ ಆಧಾರಗಳು ಲಭ್ಯವಿದೆ.

ಮಹಾರಾಜರ ವಂಶಾವಳಿಯಲ್ಲಿ ದಾಖಲಾಗಿರುವಂತೆ ಒಂದನೇ ರಾಜ ಒಡೆಯರ ಮೊಮ್ಮಗನಾಗಿದ್ದ ಚಾಮರಾಜ ಒಡೆಯರು ಸ್ವಾಮಿಗೆ ಕಪಿಲಾ ನದಿ ತೀರದಲ್ಲಿ ನಡೆಸುತ್ತಿದ್ದ ಧಾರ್ಮಿಕ ಉತ್ಸಾವಾದಿ ಕಾರ್ಯಕ್ರಮಗಳಿಗಾಗಿ ಒಂದು ಮಂಟಪವನ್ನು ಹಾಗೂ ಅದನ್ನು ವೀಕ್ಷಿಸಲು ಬರುತ್ತಿದ್ದ ಜನರಿಗಾಗಿ ನೆರಳು ಲಭಿಸುವಂತೆ ಒಂದು ವನ ನಿರ್ಮಿಸಿರುವುದಾಗಿ ತಿಳಿದು ಬರುತ್ತದೆ. [2]

ಶ್ರೀ ಕಠೇಶ್ವರ ದೇವಾಲಯವನ್ನು ವಿವಿಧ ರಾಜಮನೆತನಗಳು ಬೇರೆ ಬೇರೆ ಕಾಲಗಳಲ್ಲಿ ನಿರ್ಮಿಸಿದ್ದಾರೆ. ಸ್ಥಳ ಪುರಾಣದ ಪ್ರಕಾರ ಈ ದೇವಾಲಯದ 'ಗರ್ಭಗೃಹ'ವು ಕೃತ ಯುಗದಲ್ಲಿ ಪರಶುರಾಮನಿಂದ ಕಟ್ಟಲ್ಪಟ್ಟಿತು. ದೇವಾಲಯದ 'ಸುಖನಾಸಿ'ಯು 9ನೇ ಶತಮಾನದ ಗಂಗರ ಕಾಲಕ್ಕೂ, ಪಂಶವಿಂಶತಿ ರಂಗವು 13ನೇ ಶತಮಾನದ ಹೊಯ್ಸಳರ ಕಾಲಕ್ಕೆ ಸೇರಿದ್ದೆಂದೂ ಹಾಗೂ ದೇವಲಯದ ಚಿಕ್ಕ ಗೋಪುರವು ವಿಜಯನಗರ ಕಾಲದ್ದೆಂದೂ ತಿಳಿದುಬಂದಿದೆ.

ಶ್ರೀ ಕಂಠೇಶ್ವರ ಸ್ವಾಮಿಯು ಮೈಸೂರಿನ ಒಡೆಯರ ಮನೆತನದ ದೇವರಾಗಿದ್ದ ಕಾರನ ಈ ದೇವಾಲಯವು ಸ್ವಾಭಾವಿಕವಾಗಿ ಆ ಮನೆತನದ ಗಮನವನ್ನು ಹೆಚ್ಚು ಸೆಳೆಯಿತು. ಪರಿಣಾಮವಾಗಿ ಮೈಸೂರಿನ ಒಡೆಯರ ಮನೆತನದವರು ದೇವರಿಗೆ ಉದಾರವಾಗಿ ಕೊಡುಗೆಗಳನ್ನು ನೀಡಿದ್ದಾರಲ್ಲದೆ ದೇವಾಲಯಕ್ಕೆ ನೂತನ ಭಾಗಗಳನ್ನು ಕಟ್ಟಿಸಿದರು. ಒಡೆಯರ ಮನೆತನದವರು ಶ್ರೀ ಕಂಠೇಶ್ವರ ದೇವರಿಗೆ ದಾನ ನೀಡಿರುವುದಕ್ಕೆ ಮೊದಲ ದಾಖಲೆ ನಮಗೆ ಒಂದನೇ ರಾಜ ಒಡೆಯರ ಕಾಲದಲ್ಲಿ ಲಭಿಸುತ್ತದೆ. ಒಡೆಯರು ದೇವರಿಗೆ 'ವಿಭೂತಿ ರೇಖೆಯುಳ್ಳ ಚಿನ್ನದ ಕೊಳಗ' ಒಂದನ್ನು ನೀಡಿರುವುದಾಗಿ ತಿಳಿದುಬಂದಿದೆ. [3] ನರಸರಾಜ ಒಡೆಯರ್ ಅವರು ದೇವಾಲಯದಲ್ಲಿ ಉತ್ಸವಕ್ಕಾಗಿ ಬಳಸುತ್ತಿದ್ದ 'ಗೌತಮ ರಥವನ್ನು' ದುರಸ್ತಿ ಮಾಡಿಸಿದರು.

ಕಳಲೆ ಮನೆತನದ ವ್ಯಕ್ತಿ, ಮೈಸೂರಿನ ದಳವಾಯಿ ಆಗಿದ್ದ ನಂಜರಾಯ್ಯನು 'ನಂಜುಂಡೇಶ್ವರ ಸ್ವಾಮಿ'ಯ ಅನನ್ಯ ಭಕ್ತನಾಗಿದ್ದರು. ಹಾಗಾಗಿಯೇ ಈತನ ಕಾಲದಲ್ಲಿ ಹೊಂದೆದಿಗಿಂತಲೂ ನಂಜನಗೂಡು ಕ್ಷೇತ್ರ ಹೆಚ್ಚು ಪ್ರಖ್ಯಾತವಾಯಿತು. ಈತ ಅಂದಿನ ಒಡೆಯರಾಗಿದ್ದ ಇಮ್ಮಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ಅಗ್ರಹಾರ ಒಂದನ್ನು ನಿರ್ಮಿಸಿ, ವೃತ್ತಿಗಳಲ್ಲಿ ಸ್ವಾಮಿಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬ್ರಾಹ್ಮಣರಿಗೆ ನೀಡಿದನು. [4] ಈತ 64 ಶಿವಭಕ್ತರ ಶಿಲಾವಿಗ್ರಹಗಳನ್ನು ಕೆತ್ತಿಸಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಪ್ರತೀ ವಿಗ್ರಹದ ಪೀಠದಲ್ಲಿ ಶಿವಭಕ್ತನ ಹೆಸರನ್ನು ಕೆತ್ತಲಾಗಿದೆ.


ವಿಸ್ತೀರ್ಣ / ಜನಸಂಖ್ಯೆ
ಮೈಸೂರು ಜಿಲ್ಲೆ
AREA vs POPULATION
MYSORE DISTRICT
ಅಧ್ಯಯನಕ್ಕೆ ಆಯ್ಕೆ ಮಾಡಿದ ಗ್ರಾಮ
MANDYA DISTRICT
ಮಂಡ್ಯ ಜಿಲ್ಲೆ
HASSAN DISTRICT
ಹಾಸನ ಜಿಲ್ಲೆ
KODAGU DISTRICT
ಕೊಡಗು ಜಿಲ್ಲೆ
CHAMARAJANAGARA DISTRICT
ಚಾಮರಾಜನಗರ ಜಿಲ್ಲೆ
605
239 1
815
224 254
PERIYAPATNA
867
253 926
815
1.038 4
1.618
245.930
982
360 223
279.0
AREA (SQ KM)
POPULATION (2001 CENSUS)
N
W
E
S
0
10
20
Kilometers
Source: District Statistical Office, Mysore

ನಕ್ಷೆ 4.1

ಮೈಸೂರು ಜಿಲ್ಲೆಯಲ್ಲಿ ನಂಜನಗೂಡು

ಕ್ರ.ಸಂ	ವಿವರಗಳು	ಭಾರತ	ಕರ್ನಾಟಕ	ಮೈಸೂರು	ನಂಜನಗೂಡು
1.	ಒಟ್ಟು ವಿಸ್ತೀರ್ಣ (ಚ.ಕಿ.ಮೀ)	30650127	191791	9854	991
2	ಜನಸಂಖ್ಯೆ ಒಟ್ಟು	1027015247	52733958	2641027	260223
	ಗಂಡಸರು	531277078	26856343	1344670	182528
	ಹೆಂಗಸರು	495738169	25877615	1296367	177695
3	ಗ್ರಾಮೀಣ ಪ್ರದೇಶ ಒಟ್ಟು	741660293	34814100	1658899	311991
	ಗಂಡಸರು	381141184	17618593	829406	158135
	ಹೆಂಗಸರು	360519109	17195507	829496	153856
4	ನಗರ ಪ್ರದೇಶ ಒಟ್ಟು	28554954	1799858	982128	48232
	ಗಂಡಸರು	150135894	9237750	491079	24393
	ಹೆಂಗಸರು	135219050	8682108	491060	23839
5	ದಡಕದ ಬೆಳವಣಿಗೆ ಒಟ್ಟಾರೆ (1991 ರಿಂದ 2001) ಶೇಕಡಾ	180627359 21.34	7756757 17.25		
6	ಜನಸಾಂದ್ರತೆ	324	275	285	363
7	ಲಿಂಗಾನುಪಾತ (2000 ಪ್ರತಿ ಪುರುಷರಿಗೆ ಮಹಿಳೆಯರ ಸಂಖ್ಯೆ)	933	964	964	974
8	ಸಾಕ್ಷರತೆ ಪ್ರಮಾಣ ಒಟ್ಟು	566714995	30774988	1471155	156128
	ಶೇಕಡಾ	65.38	67.04	70.88	49.58
	ಗಂಡಸರು ಒಟ್ಟು	33996904	17817382	8361.95	91411
	ಶೇಕಡಾ	75.85	76.29	70.88	57.24
	ಹೆಂಗಸರು ಒಟ್ಟು	2267745947	129.57306	634960	64717
	ಶೇಕಡಾ	54.15	57.45	55.81	41.70
9	ತಾಲೂಕುಗಳ ಸಂಖ್ಯೆ	3298	176	7	–

ಆಧಾರ: ಮೈಸೂರು,ಜಿಲ್ಲಾ ಅಂಕಿ ಅಂಶಗಳ ನೋಟ 2007.

ಕೋಷ್ಟಕ 4.1

4.3.1 ಜನಸಾಂದ್ರತೆ ಮತ್ತು ಲಿಂಗಾನುಪಾತ:

ಮೈಸೂರು ಜಿಲ್ಲೆ0ು ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ತಾಲೂಕಿನ ಪಾಲು ಶೇ.14.45ರಷ್ಟಿದೆ. 7 ತಾಲೂಕುಗಳ ಪೈಸೆ ಭೌಗೋಳಿಕ ವಿಸ್ತೀರ್ಣದಲ್ಲಿ ನಂಜನಗೂಡು 2ನೇ0ು ಸ್ಥಾನವಲ್ಲಿದೆ. ಮೊದಲ್ನೆ0ು ಸ್ಥಾನದಲಿ ಎಚ್.ಡಿ.ಕೋಟೆ (1622) ಇದೆ. ಈ ಜಿಲ್ಲೆ0ು ಒಟ್ಟು ಜನಸಂಖ್ಯೆ0ುಲ್ಲಿ ಶೇ,13.63ರಷ್ಟು ತಾಲೂಕಿನ ಪಾಲಾಗಿದೆ. ಮೈಸೂರು ತಾಲೂಕನ್ನು ಹೊರತುಪಡಿಸಿದರೆ (39.32) ಅತ್ಯಂತ ಹೆಚ್ಚು ಜನರಿರುವುದು ನಂಜನಗೂಡು ತಾಲೂಕಿನಲ್ಲೆ. ತಾಲೂಕಿನ ಜನಸಾಂದ್ರತೆ ಪ್ರತಿ ಚ.ಮಿ.ಗೆ, 363 ಇದು ಜಿಲ್ಲೆ0ು (385) ಜನಸಾಂದ್ರತೆಗಿಂತಲೂ ಕಡಿಮೆಯಿದೆ. ಅತ್ಯಧಿಕ ಜನಸಾಂದ್ರತೆ ಹೊಂದಿರುವ ತಾಲೂಕುಗಳ ಪೈಕಿ ನಂಜನಗೂಡು 4ನೇ0ು ಸ್ಥಾನದಲ್ಲಿದೆ. [5]

ಮೈಸೂರು ಜಿಲ್ಲೆ0ು ಲಿಂಗಾನುಪಾತವು ಪ್ರತಿ 1000 ಗಂಡಸರಿಗೆ 964 ಆಗಿರುತ್ತದೆ. ನಂಜನಗೂಡು ತಾಲೂಕಿನಲ್ಲಿ ಇದು 1000: 974 ಇದು ಅಖಿಲ ಭಾರತದ (1000:933) ಕರ್ನಾಟಕದ (1000:964) ಲಿಂಗಾನುಪಾತಕ್ಕಿಂತ ಅಧಿಕವಾಗಿರುತ್ತದೆ. ಹೆಣ್ಣಾದರೇನು ಗಂಡದರೇನು? ಮಗು ಮಗುವೇ. ಸ್ತ್ರೀ–ಪುರುಷ ಸಮಾನತೆ0ು ಧೋರಣೆ0ು ಪ್ರತಿಫಲವಿದು. 2001ರ ಜನಗಣತಿ0ು ಪ್ರಕಾರ ಭಾರತವಲ್ಲಿ ಕಳೆದುಹೋದ ಜನಸಂಖ್ಯೆ0ು ಒಟ್ಟು ಮೊತ್ತ 35 ದಶಲಕ್ಷಗಳು.[6] ಕಳೆದು ಹೋದ ಜನಸಂಖ್ಯೆ0ೆಂದರೆ ಲಿಂಗಪತ್ತೆ ಹಚ್ಚಿ ಮಾಡಿದ ಭ್ರೂಣ ಹತ್ಯೆ ಎಂದರ್ಥ. ಈ ವಿಷ್ಯದಲ್ಲಿ ಮೈಸೂರು ಜಿಲ್ಲೆ0ು ಲಿಂಗಾನುಪಾತದಲ್ಲಿ ಸಾಧನೆ ಮಾಡಬೇಕಾಗಿದೆ.

4.3.2 ವಿತರಣೆ ಮತ್ತು ಸಾಕ್ಷರತೆ:

ನಂಜನಗೂಡು ತಾಲೂಕಿನ ಒಟ್ಟು ಜನಸಂಖ್ಯೆ0ುಲ್ಲಿ ಶೇ.86:61ರಷ್ಟು ಗ್ರಾಮವಾಸಿಗಳಾದರೆ ಕೇವಲ 13.638ರಷ್ಟು ಮಾತ್ರ ನಗರವಾಸಿಗಳು. ಮೈಸೂರು ಜಿಲ್ಲೆ0ುಲ್ಲಿ ಒಟ್ಟು ಜನಸಂಖ್ಯೆ0ುಲ್ಲಿ ನಗರವಾಸಿಗಳ ಪ್ರಮಾಣ 37.18. ನಂಜನಗೂಡು ಮೈಸೂರು ತಾಲೂಕಿಗೆ ಅಂಟಿಕೊಂಡಿದ್ದರೂ (ಗ್ರಾಮವಾಸಿಗಳು 62.81) ನಗರೀಕರಣ ಪ್ರತಿಕ್ರಿ0ೆಗೆ ಪೂರ್ತಿ0ಾಗಿ ಒಳಗಾಗಿಲ್ಲ.

ನಂಜನಗೂಡು ತಾಲೂಕಿನ ಒಟ್ಟು ಜನಸಂಖ್ಯೆ0ುಲ್ಲಿ ಪರಿಶಿಷ್ಟ ಜಾತಿ (22.46) ಮತ್ತು ಪರಿಶಿಷ್ಟ ಪಂಗಡಗಳ (13.20) ಒಟ್ಟು ಪ್ರಮಾನ ಈ 35.66ರಷ್ಟು ಇದು ಇಡೀ ಜಿಲ್ಲೆ0ು (17.70)ಕ್ಕಿಂತಲೂ ಅಧಿಕವಾಗಿದೆ. ತಾಲೂಕಿನ ಸಾಕ್ಷರತೆ0ು ಪ್ರಮಾಣ ಶೇ.49.58ರಷ್ಟಿದ್ದು ಇದು ಜಿಲ್ಲೆ0ು ಸಾಕ್ಷರತೆ ಪ್ರಮಾಣ (63.48)ಕ್ಕಿಂತಲೂ ಕಡಿಮೆಯಿದೆ. ತಾಲೂಕಿನಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು (41.70) ಪುರುಷ

ಸಾಕ್ಷರತಾ ಪ್ರಮಾಣಕ್ಕಿಂತ (57.24) ಎಷ್ಟೋ ಕಡಿಮೆ ಇದೆ. ಪುರುಷರಿಗಿಂತ ಮಹಿಳೆಯರ ಸಂಖ್ಯೆ ಕಡಿಮೆಯಿದ್ದು ಸಾಕ್ಷರತಾ ಪ್ರಮಾಣದಲ್ಲೂ ಕಡಿಮೆಯಿರುವುದು ಆತಂಕಕಾರಿ ವಿಷಯವಾಗಿದೆ. ಮನೆಯ ಮೊದಲ ಪಾಠ ಶಾಲೆಯಾಗಬೇಕಾದರೆ ಜನನಿ ನಿಜವಾದ ಅರ್ಥದಲ್ಲಿ ಗುರುವಾಗಬೇಕಾದರೆ ಆಕೆ ಸಾಕ್ಷರಳಾಗಿರಬೇಕು.

4.3.3 ಭೂಮಿಯ ಬಳಕೆ:


ನಂಜನ ತಾಲೂಕಿನ ಒಟ್ಟು ವಿಸ್ತೀರ್ಣ 98541 ಹೆಕ್ಟೇರುಗಳು. ಮೈಸೂರು ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ನಂಜನಗೂಡು ತಾಲೂಕಿನ ಪಾಲು ಶೇ.14.56ರಷ್ಟು ಮಾತ್ರ. ತಾಲೂಕಿನ ಭೂಮಿಯ ಬಳಕೆಯ ಚಿತ್ರಣವನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ.

ನಂಜನಗೂಡಿನ ಭೂಮಿಯ ಬಳಕೆ

ಕ್ರ.ಸಂ	ವಿವರಗಳು	ಹೆಕ್ಟೇರುಗಳಲ್ಲಿ	ಶೇಕಡಾ	ಕೋನ
1	ವ್ಯವಸಾಯೇತರ ಭೂಮಿ	12,211	9.65	34°
2	ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಭೂಮಿ	2,246	1.77	6.37°
3	ಬೀಳು ಭೂಮಿ	15712	12.42	45°
4	ಆರಣ್ಯ ಭೂಮಿ	3688	2.91	10°
5	ಬಿತ್ತನೆಯಾಗಿರುವ ಭೂಮಿ	86168	68.16	245°
6	ಸಾಗುವಳಿ ಮಾಡದಿರುವ ಇತರೆ ಭೂಮಿ	6384	5.05	18°
	ಒಟ್ಟು	126409	100	360°

ಕೋಷ್ಟಕ 4.2

ಭೂಮಿಯ ಬಳಕೆ



ಚಿತ್ರ 4.1

ನಂಜನಗೂಡು ಭೂಮಿ0ು ಬಳಕೆ0ು ಪಕ್ಷಿ ನೋಟದಿಂದ ಕೆಲವು ಪ್ರಮುಕ ತೀರ್ಮಾನಗಳಿಗೆ ಬರಬಹುದು.

- ತಂಬಾಕಿನ ಕೃಷಿ ಭೂಮಿ0ು ಪ್ರಮಾಣ (ಶೇ.68.16) ರಷ್ಟಿದು ಇನ್ನು ಸುಧಾರನೆ0ಯಾಗಬೇಕಾಗಿದೆ. ಸಾಗುವಳಿ 6384 ಹೆಕ್ಟೇರು ಭೂಮಿ0ುನ್ನು ಕೃಷಿಗೆ ಬಳಸಬಹುದೆಂದು ಸರಕಾರದ ವರದಿ ತಿಳಿಸುತ್ತದೆ. ಈ ಭೂಮಿ0ುನ್ನು ಸಾಗುವಳಿಗೆ ಬಳಸಲು ಸಾಧ್ಯವಾದರೆ ಒಟ್ಟು ಭೂಮಿ0ುಲ್ಲಿ ಮುಕ್ಕಾಲು ಭಾಗ ಕೃಷಿ ಭೂಮಿ0ಯಾಗಿಬಿಡುತ್ತದೆ. ಸಾಗುವಳಿಗೆ ಅರ್ಹವಾದರೂ ಸಾಗುವಳಿ0ಯಾಗದಿರುವ ಭೂಮಿ0ುನ್ನು ಬಡತನದ ರೇಖೆ0ು ಕೆಳಗಿರುವ ಕೂಲಿ ಕಾರ್ಮಿಕರಿಗೆ ಹಂಚಲು ಸಾಧ್ಯವಾದರೆ ಅದು ಬಡತನ ಮತ್ತು ಅಪೂರ್ಣ ಉದ್ಯೋಗ ನಿವಾರನೆ0ುಲ್ಲೊಂದು ಮೈಲಿಗಲ್ಲಾಗುತ್ತದೆ.
- ನಂಜನಗೂಡು ತಾಲೂಕಿನ ಒಟ್ಟು ಭೂ ಪ್ರದೇಶದಲ್ಲಿ ಶೇ (12.42) ಬಿಳು ಭೂಮಿ ಮತ್ತು ಶೇ.1.77 ರಷ್ಟು ಬಂಜರು ಭೂಮಿ0ುೆಂದು ಸರಕಾರದ ಅಂಗಗಳಿಂದ ತಿಳಿದು ಬರುತ್ತದೆ. ಈ ಬಂಜರು ಮತ್ತು ಬೀಳು ಭೂಮಿ0ುನ್ನು ಸಮಪರ್ಕವಾಗಿ ಬಳಸಲು ಮಾರ್ಗೋಪಾ0ುಗಳನ್ನು ಕಂಡು ಹಿಡಿದು ಅದನ್ನು ಭೂರಹಿತ ಕೂಲಿಕಾರ್ಮಿಕರು, ನಿರ್ಗತಿಕರಿಗೆ ವಿತರಿಸಬಹುದು. ಇದೊಂದು ಬಲು ದೊಡ್ಡ ಸವಾಲಿನ ವಿಷ0ುವಾಗಿದೆ.

- ನಂಜನಗೂಡು ತಾಲೂಕಿನ ಒಟ್ಟು ಆ ಭೂ ಪ್ರದೇಶದಲ್ಲಿ ಅರಣ್ಯ ಭೂಮಿ೦ಯ ಪಾಲು ಕೇವಲ 2.91ರಷ್ಟು ಮಾತ್ರ. ತಾಲೂಕಿನ ಪರಿಸರ ಅಸಮತೋಲನಕ್ಕಿದು ಸ್ಪಷ್ಟ ಪುರಾವೆ೦ಯಾಗಿದೆ. ೦ಯಾವುದೇ ಭೂ ಪ್ರದೇಶದ ಮೂರನೇ ಒಂದರಷ್ಟು ಭೂಮಿ ಅರಣ್ಯಮ೦ಯವಾಗಿದ್ದರೆ. ಮಾತ್ರ ಪರಿಸರ ಸಂರಕ್ಷಣೆ೦ಯಾಗುತ್ತದೆಂಬುದು ಪರಿಸರ ವಿಜ್ಞಾನಿಗಳು ಸಂಶೋಧನೆಗಳ ಮೂಲಕ ಕಂಡು ಕೊಂಡ ಸತ್ಯ.[7] ನಂಜನಗೂಡು ತಾಲೂಕಿನ ಅರಣ್ಯ ಭೂಮಿ ಶೇ.2.91ರಿಂದ ಶೇ.20ಕ್ಕೆ ಹೆಚ್ಚಬೇಕಾಗಿದೆ ಬಂಜರು ಭೂಮಿ ಮತ್ತು ಬೀಳು ಭೂಮಿ೦ಯನ್ನು ಅರಣ್ಯ ಭೂಮಿ೦ಯನ್ನಾಗಿ ಪರಿವರ್ತಿಸಲು ಸಾಧ್ಯವೇ ಎಂಬ ಬಗ್ಗೆ ಅರಣ್ಯ ಮತ್ತು ಕಂದಾ೦ಯ ಇಲಾಖೆ ಜಂಟಿ೦ಯಾಗಿ ೦ಯೋಚಿಸಿ ಕಾ೦ರ್ಯ ಪ್ರವತ್ತವಾಗಬೇಕಾಗಿದೆ. ನಂಜನಗೂಡು ತಾಲೂಕಿನ ಭೂ ಬಳಕೆ೦ಯ ವಿಧಾನವನ್ನು ಬದಲಾಯಿಸುವ ಅಗತ್ಯವಿದೆ. ಸರಕಾರವು ಸರ್ಕಾರೇತರ ಸಂಸ್ಥೆಗಳ ನೆರವನ್ನು ಪಡೆದುಕೊಂಡು ಭೂ ಬಳಕೆ೦ಯ ವಿಧಾನವನ್ನು ಬದಲಾಯಿಸಿ ಇದನ್ನೊಂದು ಸಮೃದ್ಧ ತಾಲೂಕನ್ನಾಗಿ ಪರಿವರ್ತಿಸಬೇಕಾಗಿದೆ.

4.3.4 ಮಳೆ೦ಯ ಪ್ರಮಾಣ:


ಮೈಸೂರು ಜಿಲ್ಲೆಗೆ 2002 ರಿಂದ 2007ರವರೆಗೆ ಸರಾಸರಿ 482ರಿಂದ 81058 ಮಿ.ಮೀ.ಗಳಲ್ಲಿ ಮಳೆ೦ಯಾಗಿದೆ. ಕಳೆದ 5 ವರ್ಷಗಳಲ್ಲಿ ಜಿಲ್ಲೆಗೆ ಸಾಕಷ್ಟು ಪ್ರಮಾಣದಲ್ಲಿ ಮಳೆ೦ಯಾಗಿದೆ. ಈ ದಿಸೆ೦ಯಲ್ಲಿ ನಂಜನಗೂಡಿಗೆ 2007ರಲ್ಲಿ 689 ಮಿ.ಮಿಗಳಷ್ಟು ಮಳೆ೦ಯಾಗಿತ್ತು. ಈ ಜಿಲ್ಲೆಗೆ 2007ರಲ್ಲಿ ಸರಾಸರಿ 821 ಮಿ.ಮಿ.ಗಳಷ್ಟು ಮಳೆ೦ಯಾಗಿತ್ತು.

ತಂಬಾಕು ಬೆಳೆಗೆ ಮುಖ್ಯವಾಗಿ ಮಳೆ೦ಯು ಪ್ರಮುಖವಾದಂತಹ ಅಂಶವಾಗಿದೆ. ಈ ವಿಷ೦ಯದಲ್ಲಿ 2007ರಲ್ಲಿ ಕಡಿಮೆ ಪ್ರಮಾಣದ ಮಳೆ೦ಯನ್ನು ಕಾಣಲಾಗಿತ್ತು. ಉಳಿದಂತೆ ಜಿಲ್ಲೆ೦ಯ 6 ತಾಲೂಕುಗಳಿಗೆ ಉತ್ತಮ ಮಳೆ೦ಯನ್ನು 2006–2007ರಲ್ಲಿ ಕಾಣಬಹುದಾಗಿತ್ತು.

2002ರಿಂದ 2006ರವರೆಗೆ ಜಿಲ್ಲೆ೦ಯಲ್ಲಿ ಉತ್ತಮವಾದಂತಹ ಮಳೆ೦ಯ ಪ್ರಮಾಣವನ್ನು ಕಾಣಲಾಯಿತು. 2006ರಲ್ಲಿ ಪಿರಿ೦ಯಾಪಟ್ಟ ಹಾಗೂ ಎಚ್.ಡಿ.ಕೋತೆಗೆ ಹೆಚ್ಚಿನ ಪ್ರಮಾಣದಲ್ಲಿ ಮಳೆ೦ಯಾಗಿತ್ತು.

ಜಿಲ್ಲೆ೦ಯಲ್ಲಿ ಬಿದ್ದ ಮಳೆ೦ಯ ಪ್ರಮಾಣವನ್ನು ಈ ಕೆಳಗಿನ ರೇಖಾ ನಕ್ಷೆ೦ಯ ಮೂಲಕ ತಿಳಿಸಬಹುದಾಗಿದೆ.

ಜಿಲ್ಲೆಯಲ್ಲಿ 2002ರಿಂದ 2006ರವರೆಗೆ ಬಿದ್ದ ಮಳೆಯ ಪ್ರಮಾಣ



ಚಿತ್ರ 4.2

ಮೈಸೂರು ಜಿಲ್ಲೆಯ ಇತ್ತೀಚಿನ ವರ್ಷಗಳಲ್ಲಿ ಬಿದ್ದ ವಾಸ್ತವಿಕ ಮಳೆಯ ಪ್ರಮಾಣ ಮಿ.ಮೀ.ಗಳಲ್ಲಿ

ತಾಲೂಕು	ವಾಡಿಕೆ ಮಳೆ (1901–70)	1998	1999	2000	2001	2002	2003	2004	2005	2006	2007
ಹೆಚ್.ಡಿ.ಕೋಟೆ	904	775	985	1050	827	661	921	925	1171	630	1182
ಹುಣಸೂರು	761	662	1050	943	824	636	721	743	1003	758	878
ಕೆ.ಆರ್.ನಗರ	741	840	842	909	737	556	508	749	924	692	778
ಮೈಸೂರು	798	861	875	980	732	520	760	749	883	758	666
ನಂಜನಗೂಡು	697	543	708	947	970	541	579	857	1118	959	689
ಪಿರಿಯಾಪಟ್ಟಣ	858	746	930	937	1000	707	783	838	1216	874	942
ಟಿ.ನರಸೀಪುರ	718	718	1242	987	593	456	563	807	1091	562	614
ಸರಾಸರಿ	782	735	947	965	812	582	675	810	1058	748	821
ಈಲ್ಲೆಯಲ್ಲಿ ಬಿದ್ದ ಒಟ್ಟು ಮಳೆ 6045		5145	6632	6753	5683	4077	4726	5668	4706	5233	5749

ಮಾಹಿತಿ ಮೂಲ: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ

ಕೋಷ್ಟಕ 4.3

4.3.5 ವೃತ್ತಿ0ಯು ವಿತರಣೆ:


ನಂಜನಗೂಡಿನ ಒಟ್ಟು ಜನಸಂಖ್ಯೆ 2001ರ ಜನಗಣತಿ0ಯು ಪ್ರಕಾರ 360223 ಮತ್ತು ಜಿಲ್ಲೆ0ಯು ಒಟ್ಟು ಜನಸಂಖ್ಯೆ0ಯುಲ್ಲಿ ನಂಜನಗೂಡಿನ ಜನಸಂಖ್ಯೆ0ಯು ಪ್ರಮಾಣ ಶೇ 13.63ರಷ್ಟಿದೆ. ತಾಲೂಕಿನ ವೃತ್ತಿ ವಿತರಣೆ0ಯು ಚಿತ್ರಣವನ್ನು ಈ ಕೋಷ್ಟಕ (4.4) ತೋರಿಸುತ್ತದೆ.

ನಂಜನಗೂಡಿನ ವೃತ್ತಿ0ಯು ವಿತರಣೆ:

ವೃತ್ತಿಗಳು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಕೋನ
ಕೃಷಿ ಸಾಗುವಳಿ	45589	7419	53008	34.41	123^0
ಕೃಷಿ ಕಾರ್ಮಿಕರು	33475	27393	60868	39.51	143^0
ಇತರ	33110	7038	40148	26.06	94^0
ಒಟ್ಟು	**112171**	**41850**	**154024**	**100**	**360^0**
ಮುಖ್ಯ ಕೆಲಸಗಾರರು			124175	34.47	124
ಅರೆಕೆಲಸಗಾರರು			32063	8.90	32.04
ಕೆಲಸಗಾರರಲ್ಲದವರು			203985	56.62	204
ಒಟ್ಟು			**360223**	**100**	**360^0**

ಆಧಾರ : ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ 2007.

ಕೋಷ್ಟಕ 4.4




ಚಿತ್ರ 4.3

<u>ನಂಜನಗೂಡಿನ ವೃತ್ತಿಯ ವಿತರಣೆ:</u>

ವೃತ್ತಿಗಳು	ಒಟ್ಟು	ಶೇಕಡಾ	ಕೋನ
ಮುಖ್ಯ ಕೆಲಸಗಾರರು	124175	34.47	124
ಅರೆಕೆಲಸಗಾರರು	32063	8.90	32.04
ಕೆಲಸಗಾರರಲ್ಲದವರು	203985	56.62	204
ಒಟ್ಟು	**360223**	**100**	**360^{0}**

ಆಧಾರ : ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ 2007.

ಕೋಷ್ಟಕ 4.4.1



ಚಿತ್ರ 4.4

ನಂಜನಗೂಡು ತಾಲೂಕಿನ ಜನಸಂಖ್ಯೆಯಲ್ಲಿ ಶೇ 34.47ರಷ್ಟು ಮುಖ್ಯ ಕೆಲಸಗಾರರು ಮತ್ತು ಶೇ.8.90ರಷ್ಟು ಅರೆ ಕೆಲಸಗಾರರು ಉಳಿದ ಶೇ.56.62ರಷ್ಟು ಕೆಲಸಗಾರರಲ್ಲದವರು.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರರಲ್ಲದವರ ಪ್ರಮಾಣ ಶೇ 58ರಷ್ಟಿದೆ. ನಂಜನಗೂಡು ತಾಲೂಕಿನಲ್ಲಿ ಈ ಪ್ರಮಾಣ ಶೇ 56.62ರಷ್ಟಿದ್ದು ಅಸಮಾಧಾನಕಾರಿ ಸಂಗತಿ. ಕೆಲಸಗಾರರಲ್ಲದವರೆಂದರೆ 15 ವಯಸ್ಸಿಗಿಂತ ಕೆಳಗಿನವರು 60ಕ್ಕಿಂತ ಹೆಚ್ಚು ವಯಸ್ಸಿನವರು. ಕಾಲೇಜು ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿಗಳು. ಈ ವರ್ಗಗಳ ಖಚಿತ ಅಂಶ ಲಭ್ಯವಿಲ್ಲ. ಕೆಲಸಗಾರರಲ್ಲದವರ ಮಾಹಿತಿಗಳನ್ನು ಸಂಗ್ರಹಿಸಿ ವರ್ಗೀಕರಿಸಿ ಅವರಲ್ಲಿ ನಿರುದ್ಯೋಗಿಗಳು ಎಷ್ಟಿದ್ದಾರೆ ಮತ್ತು ಅವರನ್ನು ಹೇಗೆ ಉದ್ಯೋಗ

೦ಯೋಗ್ಯರನ್ನಾಗಿರುವಷ್ಟಿರುವ ಅರೆಕೆಲಸಗಾರರನ್ನು ಪೂರ್ಣಕೆಲಸಗಾರರನ್ನಾಗಿ ಪರಿವರ್ತಿಸಬಹುದಾಗಿದೆ. ಇದು ಗ್ರಾಮೀಣಾಭಿವೃದ್ಧಿ ಮುಂದಿರುವ ಸವಾಲುಗಳು.

ವೃತ್ತಿ೦ಯ ವಿತರಣೆ೦ಯನ್ನು (ಚಿತ್ರ 4.2 ಮತ್ತು 4.3) ಅವಲೋಕಿಸಿದಾಗ ಕೆಲವು ಕುತೂಹಲಕರ ಅಂಶಗಳು ಗೋಚರಿಸುತ್ತವೆ. ಕೃಷಿ ಸಾಗುವಳಿ ಮಾಡಿಕೊಂಡು ಮತ್ತು ಕೃಷಿ ಕಾರ್ಮಿಕರಿಗೆ ಜೀವನ ಕಂಡುಕೊಳ್ಳುವವರ ಪ್ರಮಾಣ ಒಟ್ಟು ಜನಸಂಖ್ಯೆ೦ಯಲ್ಲಿ ಶೇ 73.94 ಉದ್ಯೋಗ ಒದಗಿಸುವ ದೃಷ್ಟಿಯಿಂದ ಕೃಷಿ೦ಯು ನಂಜನಗೂಡಿನ ಆರ್ಥಿಕತೆ೦ಯನ್ನು ಬೆನ್ನೆಲುಬಾಗಿ ಉಳಿದಿದ್ದರೂ ಇನ್ನೂ ಸಾಕಷ್ಟು ಸುಧಾರಣೆ೦ಯನ್ನು ಕಂಡುಕೊಳ್ಳಬೇಕಾಗಿದೆ. ದೇಶದ ವೃತ್ತಿ ವಿತರಣೆ೦ಯನ್ನು ಗಮನಿಸಿದರೆ ಕೃಷಿ೦ಯು ಹಳೆ೦ಯ ವೈಭವದ ಸ್ಥಾನವನ್ನು ಉಳಿಸಿಕೊಂಡಿರುವುದು ಸ್ಪಷ್ಟವಾಗಿದೆ. ಆದರೆ ದೇಶದಲ್ಲಿ ಈಗಲೂ ಶೇ.56.7ರಷ್ಟು ಮಂದಿ ಕೃಷಿ೦ಯಲ್ಲಿ ಮತ್ತು ಸಂಬಂಧೀ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.[8] ನಂಜನಗೂಡು ತಾಲೂಕು ಕೂಡು ಇದಕ್ಕೆ ಹೊರತಾಗಿಲ್ಲ.

ತಾಲೂಕಿನ ಕೆಲಸಗಾರರಲ್ಲಿ ಶೇ 26.06 ಇತರ ವೃತ್ತಿಗೆ ಸೇರಿದವರು. ಇತರ ವೃತ್ತಿಗಳಲ್ಲಿ ಸೇವಾವಲ೦ಯದ ಮತ್ತು ಕೈಗಾರಿಕಾ ವಲ೦ಯದ ವೃತ್ತಿಗಳು ಒಳಗೊಂಡಿವೆ. ದೇಶದ ಆರ್ಥಿಕತೆ೦ಯಲ್ಲಿ ಈಗ ಸೇವಾವಲ೦ಯ ಬಹಳ ಮಹತ್ವ ಪಡೆದುಕೊಳ್ಳುತ್ತಿದೆ. ವ್ಯಾಪಾರ, ವಾ೦ಯುವ್ಯವಿಹಾರ, ಸಾರಿಗೆ ಸಂಪರ್ಕ, ಹೋಟೆಲು, ಪ್ರವಾಸದ್ಯೋಮ, ಆಸ್ಪತ್ರೆ, ವಿಮೆ, ಶಿಕ್ಷಣ ಸಂಸ್ಥೆ, ಧಾರ್ಮಿಕ ಸಂಸ್ಥೆ ಇತ್ಯಾದಿಗಳನ್ನು ಒಳಗೊಂಡಿರುವ ದೇಶದ ಸೇವಾವಲ೦ಯದಲ್ಲಿ ಒಟ್ಟು ಜನಸಂಖ್ಯೆ೦ಯ ಶೇ.26ರಷ್ಟು ಮಂದಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಷ್ಟ್ರೀ೦ಯ ಆದಾ೦ಯದಲ್ಲಿ ಇದರ ಪಾಲು ಅರ್ಧಾಂಶಕ್ಕಿಂತಲೂ ಅಧಿಕ.[9] ಸಹಜವಾಗಿ ನಂಜನಗೂಡಿನ ಆರ್ಥಿಕತೆ೦ಯಲ್ಲಿ ತೃತೀ೦ಯ ರಂಗದ ಪಾಲು ದೊಡ್ಡದಾಗಿ೦ಯೇ ಇದೆ. [10]

ತಾಲೂಕಿನಲ್ಲಿ ಸಣ್ಣ ಕೈಗಾರಿಕಾ ಘಟಕಗಳು ಚೆನ್ನಾಗಿ ಕಾ೦ರ್ಯನಿರ್ವಹಿಸುವುದನ್ನು ಅಂಕಿ –ಅಂಶಗಳು ತಿಳಿ೦ಯಪಡಿಸುತ್ತವೆ. 2007ರ ಒಟ್ಟು 273 ಸಣ್ಣ ಕೈಗಾರಿಕಾ ಘಟಕಗಳಿದ್ದು. ಇವು 9109 ಮಂದಿಗೆ ಉದ್ಯೋಗ ಕಲ್ಪಿಸಿವೆ. ಒಟ್ಟು ಕೆಲಸಗಾರರಲ್ಲಿ ಸಣ್ಣ ಕೈಗಾರಿಕಾ ಉದ್ಯೋಗಿಗಳ ಪ್ರಮಾಣ ಶೇ.2.52ರಷ್ಟು ತಾಲೂಕಿನಲ್ಲಿ ಕೃಷಿ೦ಯಾಧಾರಿತ ಚಟುವಟಿಕೆಗಳಿಗೆ ಪೂರಕವಾಗುವಂತೆ ಕೈಗಾರಿಕೆಗಳ ಸ್ಥಾಪನೆಗೆ ಇನ್ನೂ ವಿಫುಲ ಅವಕಾಶಗಳಿವೆ.

4.3.6 ಸಾಲದ ವಿತರಣೆ೦ಯಲ್ಲಿ ಬ್ಯಾಂಕುಗಳು:

ಈ ಜಿಲ್ಲೆ೦ಯಲ್ಲಿ ಒಟ್ಟು 2004 ವಾಣಿಜ್ಯ ಬ್ಯಾಂಕುಗಳಿದ್ದು ಇದರಲ್ಲಿ 14 ಬ್ಯಾಂಕುಗಳು ನಂಜನಗೂಡಿನಲ್ಲಿವೆ. 73 ಸಹಕಾರಿ ಬ್ಯಾಂಕ್ ಸೇರಿ ಗ್ರಾಮೀಣ ಬ್ಯಾಂಕುಗಳು ಇದರಲ್ಲಿ 11 ಬ್ಯಾಂಕುಗಳು

ನಂಜನಗೂಡಿನಲ್ಲಿವೆ. ಒಟ್ಟು ಜಿಲ್ಲೆ0ಯ ಠೇವಣಿ 587557 (ಲಕ್ಷಗಳಲ್ಲಿ) ತಾಲೂಕಿನ ಪಾಲು 18404 (ಲಕ್ಷಗಳಲ್ಲಿ) ಜಿಲ್ಲೆ0ಯ ಒಟ್ಟು ಸಾಲುಗಳು 475605 (ಲಕ್ಷಗಳಲ್ಲಿ) ತಾಲೂಕಿನ ಪಾಲು 24592 (ಲಕ್ಷಗಳಲ್ಲಿ) ಜಿಲ್ಲೆ0ಯ ಠೇವಣಿ ಸಾಲದ ಅನುಪಾತ 81% ತಾಲೂಕಿನ ಪಾಲು 134. ಹೀಗೆ ಬ್ಯಾಂಕುಗಳು. ಕೃಷಿ0ಯಾಧಾರಿತ ಚಟುವಟಿಕೆಗಳ ಪ್ರೋತ್ಸಾಹ ನೀಡುತ್ತಿವೆ. ಈ ದಿಸೆ0ಯಲ್ಲಿ ಇನ್ನು ಸಾಕಷ್ಟು ಬದಲಾವಣೆಗಳನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾಡಬೇಕಾಗಿದೆ. [11]

4.4.1 ತಂಬಾಕು ಉತ್ಪಾದನೆ0ಯಲ್ಲಿ ನಂಜನಗೂಡಿನ ಪಾಲು:

ಕರ್ನಾಟಕದಲ್ಲಿ ಪ್ರಸ್ತುತ 50,000 ಬೆಳೆಗಾರರಿದ್ದು 90,000 ಹೆಕ್ಟೇರುಗಳಲ್ಲಿ ಈ ತಂಬಾಕು ಬೆಳೆ0ಯನ್ನು ಬೆಳೆ0ಯಲಾಗುತ್ತಿದೆ. ಒಟ್ಟು 100 ಮಿಲಿ0ಯನ್ ಕೆ.ಜಿ.ಗಳಷ್ಟು ತಂಬಾಕನ್ನು (ಹೊಗೆಸೊಪ್ಪನ್ನು) ಉತ್ಪಾದಿಸುತ್ತಿದ್ದಾರೆ[12].

ಇದರಂತೆ0ಯೇ ನಂಜನಗೂಡಿನಲ್ಲಿ ಪರವಾನಿಗೆ ಪಡೆದು ನೊಂದಾಯಿತ ತಂಬಾಕು ಬೆಳೆಗಾರರು ಒಟ್ಟು 408, 686 ಬ್ಯಾರನ್‌ಗಳಿದ್ದು ಒಟ್ಟು 960.4 ಹೆಕ್ಟೇರ್‌ಗಳಲ್ಲಿ ತಂಬಾಕನ್ನು ಬೆಳೆ0ಯಲಾಗುತ್ತಿವೆ. ಸುಮಾರು 14 ಲಕ್ಷ ಕೆ.ಜಿಗಳಷ್ಟು ತಂಬಾಕನ್ನು ಉತ್ಪಾದಿಸಲಾಗುತ್ತಿದೆ.[13]

ಕರ್ನಾಟಕದಲ್ಲಿ ವರ್ಜಿನಿ0ಯಾ ತಂಬಾಕನ್ನು ಹೆಚ್ಚಾಗಿ ಬೆಳೆ0ಯಲಾಗುತ್ತಿದೆ. ನಂಜನಗೂಡಿನ ಒಂದೇ ಒಂದು ಹೋಬಳಿ0ಯಲ್ಲಿ ಮಾತ್ರ ಈ ಹೊಗೆಸೊಪ್ಪನ್ನು ಬೆಳೆ0ಯುತ್ತಾರೆ. ತಂಬಾಕಿನ ಬಣ್ಣ, ಗುಣಮಟ್ಟ ಹಾಗೂ ಇನ್ನಿತರ ಅಂಶಗಳನ್ನು ಗುರುತಿಸುವ ಮೂಲಕ ಕೊಳ್ಳುವವರು ಕಂಪೆನಿಗಳ ಸೂಚನೆಗಳ ಮೂಲಕ ಬೆಳೆ0ಯನ್ನು ನಿರ್ಧಾರಮಾಡುತ್ತಾರೆ 2007ರ ಮಾರುಕಟ್ಟೆ0ಯ ಸರಾಸರಿ ಬೆಲೆಗಿಂತ 2008ರ ಸರಾಸರಿ ಬೆಲೆ0ಯಲ್ಲಿ ಹೆಚ್ಚಿನ ಏರಿಕೆ0ಯ ಪ್ರಮಾಣವನ್ನು ನಿರೀಕ್ಷಿಸಬಹುದಾಗಿದೆ.[14]

4.4.2 ಸಾಮಾಜಿಕ ಸ್ಥಿತಿಗತಿಗಳು:

ಜಾತಿ0ಯಾಧಾರಿತ 0ಯುಗವೊಂದು ತನ್ನ ಸೃಷ್ಟಿ0ಯ ಮೂಲಕ ಮಾನವ ಜನಾಂಗದೊಂದಿಗೆ ವೈಷಮ್ಯವನ್ನು ಸಾಧಿಸುತ್ತಾ, ಮಾನವರ ನಡುವೆ ಸಂಘರ್ಷವನ್ನು ಹುಟ್ಟುಹಾಕಿತ್ತು. ಇದು ತನ್ನ ವ್ಯಾಪ್ತಿ0ಯನ್ನು ಬಹುವಿಸ್ತಾರವಾಗಿ ಆರಿಸಿಕೊಂಡಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ನಗರ ಪ್ರದೇಶಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಈ ಜಾತಿ ವ್ಯವಸ್ಥೆ ತಾಂಡವವಾಡುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಈ ಜಾತಿವ್ಯವಸ್ಥೆ0ಯು ಎಷ್ಟು ಹದಗೆಟ್ಟಿತ್ತೆಂದರೆ, ಗ್ರಾಮೀಣ ಭಾಗದ ಕೆಳವರ್ಗದವು ಎಂದು ಕರೆ0ಯಲ್ಪಡುತ್ತಿದ್ದ. ವರ್ಗಗಳು ಪ್ರಾಣಿಗಳಿಗಿಂತಲೂ ಹೀನಾ0ಯವಾದಂತಹ ಸ್ಥಿತಿ0ಯಲ್ಲಿ ಜೀವನ ಸಾಗಿಸುತ್ತಿದ್ದ ಕಾಲವೊಂದಿತ್ತು.

ವಾಸ್ತವಿಕದಲ್ಲಿ ಈ ಜಾತಿವ್ಯವಸ್ಥೆ0ಯು ಅಧ್ಯ0ಯನಕ್ಕೊಳಪಡಿಸಿದ ಗ್ರಾಮಗಳಲ್ಲಿ ಇನ್ನೂ ಕಂಡುಬರುತ್ತಿದೆ. ಉನ್ನತ ವರ್ಗದವರು ಮತ್ತು ಕೆಳವರ್ಗದವರ ಎಂಬ ವರ್ಗಗಳು ಇನ್ನೂ ಪ್ರಚಲಿತದಲ್ಲಿದೆ. ಜಾತಿ ವ್ಯವಸ್ಥೆ0ಯನ್ನು ಈ ಭಾಗದಲ್ಲಿ ಪೂರ್ಣ ಪ್ರಮಾಣವಾಗಿ ಅಳಿಸಿಹಾಕಲು ಸಾಧ್ಯವಾಗದ ಮಾತು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ, ಅದರಲ್ಲಿ0ಯೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ರೀತಿ0ಯ ಜಾತಿಭೇದವಿದೆ.[15]

ಇತ್ತೀಚಿನ ದಿನಗಳಲ್ಲಿ 0ಯಾವುದೇ ದೊಂಬಿಗಲಾಟೆಗಳಿಲ್ಲದೇ, ಸಾಮರಸ್ಯ ನಡೆಸುತ್ತಿರುವುದು ಕಂಡುಬರುತ್ತಿದೆ. ಲಿಂಗಾಯಿತ ಸಮುದಾ0ಯವು ಅರ್ಥ ಪ್ರಮಾಣದಲ್ಲಿದ್ದು ಇನ್ನೂ ಕೆಲವು ದೇವಸ್ಥಾನಗಳಲ್ಲಿ ಕೆಳವರ್ಗದವರಿಗೆ ಪ್ರವೇಶ ನಿಶಿದ್ಧಿಸಲಾಗಿದೆ.

ನಂಜನಗೂಡು ತಾಲೂಕಿನಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಭಾಗದಲ್ಲೇ ಹೆಚ್ಚಿನ ಜನರು ವಾಸಿಸುತ್ತಿದ್ದಾರೆ. ಈ ಭಾಗದಲ್ಲಿ ಜಾತಿ ವ್ಯವಸ್ಥೆ0ಯು ಲಂಬಾಂತರ ಶ್ರೇಣಿ0ಯಲ್ಲಿದ್ದು ಸಮನಾಂತರ ಶ್ರೇಣಿ0ಯನ್ನು ಇನ್ನೂ ತಂದಿಲ್ಲ.

ಜಾತಿ ವ್ಯವಸ್ಥೆ0ಯು ಧಾರ್ಮಿಕ ಸ್ವಾತಂತ್ರ್ಯಕ್ಕೆ ಈ ಕ್ಷೇತ್ರದಲ್ಲಿ ಅಡ್ಡಿಪಡಿಸುವಂತಹ ಗುಣವನ್ನು ಹೊಂದಿದೆ. ಈ ಭಾಗದಲ್ಲಿ ಸಾಮಾಜಿಕ ವ್ಯವಸ್ಥೆ0ಯು ತನ್ನ ಗುಣಮಟ್ಟವನ್ನು ಸುಭದ್ರವಾಗಿ ಒಳ್ಳೆ0ಯ ರೀತಿ0ಯಲ್ಲಿ ಸ್ಥಿತಿ0ಯನ್ನು ಕಾಪಾಡಿಕೊಂಡು ಬಂದಿಲ್ಲ.

ದೇವತಾರಾಧನೆ0ಯ ಕ್ರಮವನ್ನು ಕೈಗೊಂಡು ವಂಶಪಾರಂಪ0ರ್ಯವಾಗಿ ಅನುಸರಿಸಿಕೊಂಡು ಬರುತ್ತಿದ್ದಾರೆ. ಪೂಜೆ, ದೈವಿಕಾರಾಧನೆ, ಮುಂತಾದವುಗಳನ್ನು ಉನ್ನತ ವರ್ಗದವರು ಮಾಡುತ್ತಿದ್ದಾರೆ. ಎರಡೂ ಗ್ರಾಮಗಳಲ್ಲೂ ತಮ್ಮ ಗ್ರಾಮದದೇವರುಗಳನ್ನು ಸ್ಥಾಪಿಸಿ ಆರಾಧಿಸುತ್ತಾರೆ.

ಗ್ರಾಮಗಳ ಜನಸಂಖ್ಯೆ0ಯನ್ನು ಗಮನಿಸಿದಾಗ ಲಿಂಗಾಯಿತರು ಬಹುಸಂಖ್ಯಾತರಾಗಿದ್ದಾರೆ, ಇದಕ್ಕೆ ತದ್ವಿರುದ್ಧವಾಗಿ ವಡೆ0ಯನಪುರ ಗ್ರಾಮದಲ್ಲಿ ಪರಿಶಿಷ್ಠ ಜಾತಿ0ಯವರು ಹೆಚ್ಚಿನ ಸಂಖ್ಯೆ0ಯಲ್ಲಿದ್ದಾರೆ.

4.4.3 ತಂಬಾಕು ಬೆಳೆಗಾರರ ಆರ್ಥಿಕ ಸ್ಥಿತಿಗತಿ:-

ಮಾರುಕಟ್ಟೆ0ಯ ಬೆಲೆ0ಯನ್ನು ಪೂರ್ಣ ಪ್ರಮಾಣದಲ್ಲಿ ಅವಲಂಬಿಸಿರುವ ರೈತಾಪಿ ವರ್ಗದ ಜನರು, ತಮ್ಮ ಆರ್ಥಿಕ ಪ್ರಗತಿ0ಯಲ್ಲಿ 0ಯಾವುದೇ ರೀತಿ0ಯ ಗಮನಾರ್ಹವಾದ ಪ್ರಗತಿ0ಯನ್ನು ಕಂಡುಕೊಂಡಿಲ್ಲ. ಮಾರುಕಟ್ಟೆ0ಯ ಬೆಲೆ0ಯು ತಂಬಾಕು ಬೆಳೆಗಾರರ ಆರ್ಥಿಕ ಮಟ್ಟವನ್ನು ನಿರ್ಧರಿಸುವ ಪ್ರಮುಖ ಅಂಶ. ಈ 1993ರಿಂದ 2008ರವರೆಗೆ ಮಾರುಕಟ್ಟೆ0ಯಲ್ಲಿ ಸಿಗುತ್ತಿರುವ ಸರಾಸರಿ ಬೆಲೆ0ಯು ಸದಾ ಏರಿಳಿತದಿಂದ ಕೂಡಿದ್ದಾಗಿದೆ.

ಅಧ್ಯಯನದ ಸ್ಥಳಗಳಾದ ಡಾ॥ವಡೆಯನಪುರ ಮತ್ತು ಮಡುವಿನಹಳ್ಳಿ ಗ್ರಾಮಗಳಲ್ಲಿ 50 ಜನ ತಂಬಾಕು ಬೆಳೆಗಾರರಲ್ಲಿ ಕೇವಲ 10 ರಿಂದ 15 ಜನ ರೈತರು ಮಾತ್ರ ಸಾಧಾರಣ ರೀತಿಯ ಪ್ರಗತಿಯನ್ನು ಸಾಧಿಸಿರುವಂತಹುದು ಯೋಚಿಸಿ ಬೇಕಾದಂತಹ ಅಂಶ. ನೂರಕ್ಕೆ ನೂರರಷ್ಟು ತಂಬಾಕು ಬೆಳೆಗಾರರು ಸಾಲವ ಹೊರೆಯನ್ನು ಹೊತ್ತಿದ್ದಾರೆ. ಸಂಪಾದಿಸಿದ ಹಣವು ಜೀವನ ಸಾಗಿಸಲಿಕ್ಕೆ ವ್ಯಯವಾಗುತ್ತಿರುವುದರಿಂದ ಯಾವುದೇ ರೀತಿಯ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿಲ್ಲ ಎಂಬುವುದು ಒಂದು ಶೋಚನೀಯ ಅಂಶವೇ ಸರಿ.

ಈ ಪ್ರಕಾರದಲ್ಲಿ ಗುರುತಿಸಲ್ಪಡುವ ತಂಬಾಕು ಬೆಳೆಗಾರರ ಆರ್ಥಿಕ ಸ್ಥಿತಿ–ಗತಿಗಳು ತುಂಬಾ ಹದಗೆಟ್ಟಿದೆ. ಆದಾಯ – ವೆಚ್ಚಗಳ ನಡುವೆ ಸಮರ್ಪಕವಾದ ಹೊಂದಾಣಿಕೆ ಇಲ್ಲದಿರುವುದೇ ಇದಕ್ಕೆ ಒಂದು ಪ್ರಮುಖ ಕಾರಣ. ತಂಬಾಕು ಬೆಲೆಯು ಈ ಭಾಗದ ಒಂದು ಪ್ರಮುಖ ವಾಣಿಜ್ಯ ಬೆಲೆಯಾಗಿದ್ದು. ರೈತರು ಈ ಬೆಳೆಯಲ್ಲಿ ಪರಿಪೂರ್ಣವಾಗಿ ತೊಡಗಿಕೊಂಡಿದ್ದಾರೆ.

ತಂಬಾಕು ಬೆಲೆಯು ಇತ್ತೀಚಿನ ದಿನಗಳಲ್ಲಿ ತುಂಬಾ ವೆಚ್ಚದಾಯಕವಾಗಿ ಪರಿಣಮಿಸಿದೆ. ಸಾಲದ ಶೂಲಕ್ಕೆ ತಂಬಾಕು ಬೆಳೆಗಾರರು ಲೀಲಾಜಾಲವಾಗಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ತಂಬಾಕು ಬೆಳೆಯು ಇತರ ಬೆಳೆಗಳಿಗಿಂತ ಹೆಚ್ಚಿನ ಸಂಭಾವನೆ ಪಡೆಯುವಂತಹ ಗುಣವನ್ನು ಹೊಂದಿಕೊಂಡಿದೆ. ಇತರೆ ಯಾವುದೇ ಬೆಳೆ ಬೆಲೆಯುವುದರಿಂದಲೂ ತಮ್ಮ ಸಾಲವನ್ನು ಅಥವಾ ಋಣಭಾರವನ್ನು ತಿರಿಸಲಾಗುವುದಿಲ್ಲ. ತಂಬಾಕು ಬೆಲೆಯು ರೈತರ ಪಾಲಿಗೆ ನಷ್ಟವನ್ನುಂಟುಮಾಡಿದರೂ ಕೂಡ ಸಾಲವನ್ನು ತೀರಿಸಿಕೊಳ್ಳುವ ಸಲುವಾಗಿ ಈ ಭಾಗದ ತಂಬಾಕು ಬೆಳೆಗಾರರು ಹೆಚ್ಚಾಗಿ ತಂಬಾಕನ್ನೇ ಅವಲಂಭಿಸಿಕೊಂಡಿದ್ದಾರೆ.

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತಂಬಾಕು ಬೆಲೆಗಾರರು ಯಾವುದೇ ರೀತಿಯ ಗುಣಮಟ್ಟದ ಬೆಳವಣಗೆಯನ್ನು ಕಂಡಿಲ್ಲ.

ಈ ಭಾಗದ ತಂಬಾಕು ಬೆಳೆಗಾರರ ಆರ್ಥಿಕ ಪರಿಸ್ಥಿತಿಯು ಅಷ್ಟೇನು ಪ್ರಗತಿಯನ್ನು ಕಂಡಿಲ್ಲ. ಅಧ್ಯಯನಕ್ಕೊಳಪಡಿಸಿದ, ತಂಬಾಕು ಬೆಳೆಗಾರರಲ್ಲಿ 20%ದಷ್ಟು ಜನರು ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಉಳಿದ 80% ದಷ್ಟು ಜನರು ಕುಂಠಿತವನ್ನು ಕಂಡುಕೊಂಡಿದ್ದಾರೆ. ಬಹುತೇಕ ತಂಬಾಕು ಬೆಳೆಗಾರರು ಸಾಲಬಾಧೆಗೊಳಗಾಗಿರುತ್ತಾರೆ.

ತಂಬಾಕು ಬೆಳೆಗಾರರು ಭಾಸಂಕುಗಳಿಂದಲ್ಲದೆ ಮಧ್ಯವರ್ತಿಗಳಿಂದಲೂ, ಸಾಲ ಪಡೆಯುತ್ತಾರೆ ಈ ಮಧ್ಯವರ್ತಿಗಳ ಬಡ್ಡಿಯ ಧರವು. ತಿಂಗಳಿಗೆ 10%ದಷ್ಟು ಇರುತ್ತದೆ. ಈ ಬಡ್ಡಿಯ ದರದಿಂದಾಗಿ ಎಷ್ಟೋ ಜನ ತಂಬಾಕು ಬೆಳೆಗಾರರು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲಾಗುತ್ತಿಲ್ಲ.

ಬೆಳೆಗಾರನು ತಾವು ಬೆಳೆದಂತಹ ಉತ್ಪನ್ನಕ್ಕೆ ಸರಿಯಾದ ಬೆಲೆ ನಿಗದಿರುವುದು ಮತ್ತಷ್ಟು ತೊಂದರೆಯನ್ನುಂಟು ಮಾಡಿದೆ ಮಾರುಕಟ್ಟೆಯ ಸರಾಸರಿ ಬೆಲೆಯು ಯಾವುದೇ ರೀತಿಯಲ್ಲಿಯೂ ರೈತರಿಗೆ ತೃಪ್ತಿ ನೀಡುತ್ತಿಲ್ಲ, 1993ರಿಂದ 2008 ರವರೆಗೂ ತಂಬಾಕು ಮಾರುಕಟ್ಟೆಯ ಸರಾಸರಿ ದರವು ಸದಾ ಏರು ಇಳಿತವನ್ನು ಕಂಡುಕೊಂಡಿದೆ. ಇತ್ತೀಚಿನ ದಿನಗಳಲ್ಲಿ 1 ಕೆ.ಜಿ. ಹೊಗೆ ಸೊಪ್ಪು ಬೆಳೆಯಲು ಸರಿ ಸುಮಾರು 60 ರೂಗಳವರೆಗೂ ಖರ್ಚು ಆಗುತ್ತಿರುವುದು ಕಂಡುಬರುತ್ತಿದೆ. ಇದರಿಂದಾಗಿ ಮಾರುಕಟ್ಟೆಯು ನೀಡುತ್ತಿರುವ ಸರಾಸರಿ ಬೆಲೆಯು ಯಾವುದೇ ರೀತಿಯಲ್ಲೂ ರೈತರು ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ[16].

4.4.4 ಆರ್ಥಿಕ ಪ್ರಗತಿಯ ಕುಂಟಿತಕ್ಕೆ ಕಾರಣಗಳು;

ಈ ಭಾಗದಲ್ಲಿ ಆರ್ಥಿಕ ಪ್ರಗತಿಯು ಕುಂಠಿತವಾಗಲು ಕೆಳಕಂಡ ಕಾರಣಗಳನ್ನು ನೀಡಬಹುದಾಗಿದೆ.

1. ಅಧಿಕ ಪ್ರಮಾಣದಲ್ಲಿ ಸಾಲದ ಹೊರೆ.
2. ಮಧ್ಯವರ್ತಿಗಳ ಬಡ್ಡಿಯ ದರ.
3. ಬೆಳೆಗೆ ತಕ್ಕ ಬೆಲೆ ಇಲ್ಲದಿರುವುದು.
4. ಸರಾಸರಿ ಬೆಲೆಯಲ್ಲಿ ಕುಸಿತ.
5. ಮಳೆಯ ಅಭಾವ.
6. ಮಣ್ಣಿನ ಫಲವತ್ತತೆಯಲ್ಲಿ ವ್ಯತ್ಯಾಸ.
7. ತಂಬಾಕು ಬೆಳೆಗೆ ಬೇಕಾದಂತಹ ಅಗತ್ಯ ವಸ್ತುಗಳ ಕೊರತೆ.
8. ದೇಶಿಯಾ ತಂಬಾಕಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಕುಸಿದಿರುವಿಕೆ.
9. ಇನ್ನೂ ಮುಂತಾದಂತಹ ಅನೇಕ ಕಾರಣಗಳಿಂದಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗುತ್ತಿಲ್ಲ.

4.4.5 ತಂಬಾಕು ಬೆಳೆಗಾರ ಸಾಲದ ಹೊರೆ

ಕೃಷಿ ಪ್ರಧಾನವಾದ ದೇಶವಾದ ಭಾರತವು ನಾನಾ ತರಹದ ಬದಲಾವಣೆಗಳಿಂದ ಬೇರೊಂದು ವಲಯಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುತ್ತಿದೆ. ಉದಾ: ಕೈಗಾರಿಕಾ ವಲಯ, ಸೇವಾ ವಲಯಗಳು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದ ಹತ್ತು ಹಲವು ಕ್ಷೇತ್ರಗಳು ಭಾರತದ ಕೃಷಿ ಪ್ರಾಧ್ಯಾನ್ಯತೆಯನ್ನು ಮಿತಿಗೊಳಿಸಿವೆ. ಹಾಗಿದ್ದರೂ ಸಹ ಕೃಷಿ ವಲಯಕ್ಕೆ ಹಾಗೂ ರೈತಾಪಿ ವರ್ಗಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಾಲ-ಸೌಲಭ್ಯಗಳನ್ನು ನೀಡುವ ಸರಕಾರವು ತನ್ನ ದೃಷ್ಟಿಯನ್ನು ತಂಬಾಕು ಬೆಳೆಗಾರರ ಕಡೆಗೂ ನೀಡಬೇಕಾಗಿದೆ. ಗ್ರಾಮೀಣ ಬ್ಯಾಂಕುಗಳು ಇಂದು ಸುಮಾರು 13% ಬಡ್ಡಿಯ ಪ್ರಮಾಣದಲ್ಲಿ ಸಾಲವನ್ನು

ನೀಡುತ್ತಿವೆ. ಈ ತಂಬಾಕು ಬೆಳೆಗಾರರು ಮಧ್ಯವರ್ತಿಗಳಿಂದಲೂ ಅಧಿಕ ಪ್ರಮಾಣದಲ್ಲಿ ಸಾಲವನ್ನು ಪಡೆ0ಯುತ್ತಿದ್ದಾರೆ.[17]

ಮಧ್ಯವರ್ತಿಗಳಿಂದ ಸುಮಾರು 10%ದಲ್ಲಿ ಅದು ಕೂಡ ತಿಂಗಳ ಬಡ್ಡಿ0ಯಲ್ಲಿ ಸಾಲವನ್ನು ಮಾಡುತ್ತಾರೆ. ಇದು ವಿಶೇಷವಾಗಿ ತಂಬಾಕು ಬೆಳೆಗಾರರನ್ನು ತಲ್ಲಣಗೊಳಿಸಿದೆ.

ಅಧ್ಯ0ಯನಕ್ಕೊಳಪಡಿಸಿದ ಗ್ರಾಮಗಳಲ್ಲಿ ಹೆಚ್ಚಾಗಿ ತಂಬಾಕು ಬೆಳೆ0ಯುವ ರೈತರು ಮಧ್ಯವರ್ತಿಗಳಿಂದ ಸಾಲ ಪಡೆ0ಯುವ ಅಂಶವನ್ನು ಗುರುತಿಸಬಹುದಾಗಿದೆ.

<u>ಮಧ್ಯವರ್ತಿಗಳಿಂದ ಪಡೆಯುವ ಸಾಲದ ಉದ್ದೇಶಗಳು;</u>

- ಮದುವೆ ಮುಂಜಿ ಇತರೆ ಕಾ0ರ್ಯಗಳಿಗೆ.
- ಆಕಸ್ಮಿಕ ಅವಘಡಗಳು ಸಂಭವಿಸಿದಾಗ.
- ಕುಟುಂಬದ ಸದಸ್ಯರ ಅನಾರೋಗ್ಯಗಳು.
- ಇತರ ಸಾಲುಗಳನ್ನು ತೀರಿಸುವ ಸಲುವಾಗಿ.
- ಬಿತ್ತನೆ ಬೀಜಗಳ ಖರೀಧಿಗೆ.

ಇನ್ನೂ ಮುಂತಾದ ಹತ್ತು ಹಲವು ಕಾ0ರ್ಯಗಳಿಗಾಗಿ ಈ ಭಾಗದ ತಂಬಾಕು ಬೆಳೆಗಾರರು ಮಧ್ಯವರ್ತಿಗಳಿಂದ ಸಾಲವನ್ನು ಪಡೆ0ಯುತ್ತಿದ್ದಾರೆ ಎಂಬುದನ್ನು ಈ ಮೂಲಕ ತಿಳಿ0ಯಬಹುದಾಗಿದೆ.

ತಂಬಾಕು ಬೆಳೆಗಾರರಿಗೆ ತಕ್ಕ ಮಟ್ಟಿಗೆ ವಾರ್ಷಿಕ ಬಡ್ಡಿದರ 13% ಸಾಲ ದೊರೆ0ಯುತ್ತಿದ್ದರೂ ಕೂಡ ಈ ಸಾಲವನ್ನು ಮಧ್ಯವರ್ತಿಗಳಿಂದ ಪಡೆದ ಸಾಲವನ್ನು ತೀರಿಸುವ ಸಲುವಾಗಿ ಬಳಸಿಕೊಳ್ಳುತ್ತಿದ್ದಾರೆ.

ಈ ಪ್ರದೇಶಗಳಲ್ಲಿ ಪ್ರತಿ0ಯೊಬ್ಬ ತಂಬಾಕು ಬೆಳೆ0ಯುವ ರೈತರು ಸಾಲಗಾರರಾಗಿದ್ದಾರೆ. ಅಗತ್ಯವಾದಂತಹ ಉತ್ತಮ ಬೆಲೆ ಸಿಗದೇ ಇದ್ದಾಗ ಬ್ಯಾಂಕಿನಿಂದ ಮಾಡಿದ ಸಾಲವನ್ನು ತಿರಿಸಲಾಗದೇ ಮಧ್ಯವರ್ತಿಗಳಿಂದಲೂ ಸಾಲ ಪಡೆ0ಯುತ್ತಾರೆ.

ಸರಕಾರವು ಈ ಭಾಗದ ತಂಬಾಕು ಬೆಲೆಗಾರರಿಗೆ ಒಟ್ಟು ಸುಮಾರು 1 ರಿಂದ 2 ಕೋಟಿ0ಯಷ್ಟು ಹಣವನ್ನು, ಸಾಲವಾಗಿ ನೀಡಿದೆ. ತಂಬಾಕು ಬೆಳೆ0ಯು ರೈತರನ್ನು ಕೆಲವೊಮ್ಮೆ ಹೀನಾ0ಯ ಸ್ಥಿತಿಗೆ ತಳ್ಳಿದ ಎಷ್ಟೋ ಸಂಗತಿಗಳು ಕ್ಷೇತ್ರ ಅಧ್ಯ0ಯನದ ಮೂಲಕ ತಿಳಿದು ಬಂದಿದೆ. ಅಧ್ಯ0ಯನಕ್ಕೊಳಪಡಿಸಿದ ಪ್ರತಿ0ಯೊಬ್ಬ ರೈತನೂ ಕೂಡ ಸಾಲದ ಹೊರೆ0ಯನ್ನು ಅನುಭವಿಸುತ್ತಿದ್ದಾರೆ.

ಪರವಾನಿಗೆ0ಯ ಮುಖಾಂತರ ಬೆಳೆ0ಯುವಂತಹ ಈ ಬೆಳೆ0ಯು ತನ್ನದೇ ಆದಂತಹ ವ್ಯವಸ್ಥಿತ ರೂಪುರೇಷೆಗಳಿಂದ ಮೌಲ್ಯಗಳನ್ನು ಹೊಂದಿದೆ. ರಾಷ್ಟ್ರೀ0ಯ ಹಾಗೂ ಅಂತರಾಷ್ಟ್ರೀ0ಯ ಮಾರುಕಟ್ಟೆ0ಯಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗವನ್ನು ನೀಡುತ್ತಿದೆ.

ಆಕರ ಗ್ರಂಥಗಳು

[1] ಹ0ಯವದನ ರಾವ್ ಸಿ. 'ಹಿಸ್ಟ್ರಿ ಆಫ್ ಮೈಸೂರು'

[2] ಗರಳಫರಿ ಕ್ಷೇತ್ರ / ನಂದನಗೂಡು ಸ್ಥಳ ಮಹಾತ್ಮೆ: ಆಗಮಿಕ ಶಿವಕುಮಾರ ದೀಕ್ಷಿತರು.

[3] ಹ0ಯವದನ ರಾವ್ ಸಿ. ಮೈ ಸೂರ್ ಗೆಜೆಟಿ0ಯರ್

[4] ಹ0ಯವದನ್ ರಾವ್ ಸಿ 'ಹಿಸ್ಟ್ರೀ ಆಫ್ ಮೈಸೂರು'

[5] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[6] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[7] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[8] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[9] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[10] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[11] ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ– 2007

[12] ತಂಬಾಕು ಮಂಡಳಿ ಎಚ್.ಡಿ.ಕೋಟೆ.

[13] ತಂಬಾಕು ಮಂಡಳಿ ಎಚ್.ಡಿ.ಕೋಟೆ.

[14] ತಂಬಾಕು ಮಂಡಳಿ ಎಚ್.ಡಿ.ಕೋಟೆ.

[15] ತಂಬಾಕು ಮಂಡಳಿ ಎಚ್.ಡಿ.ಕೋಟೆ.

[16] ತಂಬಾಕು ಬೆಳೆಗಾರರ ಅಭಿಪ್ರಾ0ಯ.

[17] ತಂಬಾಕು ಬೆಳೆಗಾರರ ಅಭಿಪ್ರಾ0ಯ.

ಅಧ್ಯಾಯ- 5
ಕ್ಷೇತ್ರ ಅಧ್ಯಯನ

5.1 ಅಧ್ಯಯನದ ಸ್ಥಳಗಳಾದ ಮಡುವಿನಹಳ್ಳಿ, ಹಾದನೂರು, ಒಡೆಯನ ಪುರದ ಇತಿಹಾಸ

ಈ ಮೇಲ್ಕಂಡ ಗ್ರಾಮಗಳ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಆ ಗ್ರಾಮಗಳ ಹಿರಿಯರ ಅಭಿಪ್ರಾಯಗಳಿಂದ ತಿಳಿದು ಸಂಕ್ಷಿಪ್ತ ವಿವರಣೆಯನ್ನು ನೀಡಬಹುದಾಗಿದೆ.

ಮಡುವಿನಹಳ್ಳಿ:

ಈ ಗ್ರಾಮದ ಪಕ್ಕದಲ್ಲಿ ಒಂದು ಆಳವಾದ ಕೆರೆ ಇತ್ತು. ಈ ಕೆರೆಯು ಆಳವಾಗಿರುವುದರಿಂದ ಇದನ್ನು ಅಲ್ಲಿನ ಜನರು ಗ್ರಾಮೀಣ ಭಾಷೆಯಲ್ಲಿ 'ಮಡು' ಎಂದು ಕರೆಯುತ್ತಿದ್ದರು. ಕಾಲಕ್ರಮೇಣದಲ್ಲಿ ಈ ಒಂದು ಹಿನ್ನಲೆಯಲ್ಲಿ ಈ ಗ್ರಾಮವನ್ನು ಮಡುವಿನಹಳ್ಳಿ ಎಂದು ಕರೆಯಲಾಯಿತು.[1] ಈ ಗ್ರಾಮವು ಮೈಸೂರಿನಿಂದ 58 ಕಿಲೋ.ಮೀಟರ್‌ಗಳಷ್ಟು ದೂರದಲ್ಲಿದೆ. ಈ ಗ್ರಾಮದಲ್ಲಿ ಲಿಂಗಾಯಿತ ಸಮುದಾಯವು ಪ್ರಾಬಲ್ಯವುಳ್ಳ ಸಮುದಾಯವಾಗಿದೆ. ಅಲ್ಲದೆ ಇನ್ನಿತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದುಳಿದ ವರ್ಗಗಳಿವೆ.

ಈ ಗ್ರಾಮದಲ್ಲಿ 2001ರ ಜನಗಣತಿಯ ಪ್ರಕಾರ 2346 ಜನರು ವಾಸವಾಗಿದ್ದಾರೆ ಇದರಲ್ಲಿ 1161 ಜನರು ಗಂಡಸರು ಮತ್ತು 1185 ರಷ್ಟು ಹೆಂಗಸರಿದ್ದಾರೆ ಇದರಲ್ಲಿ 715 ಜನರು ಪರಿಶಿಷ್ಟ ಜಾತಿಯವರಾಗಿದ್ದಾರೆ. ಇಲ್ಲಿ 351 ಜನರು ಗಂಡಸರು ಹಾಗೂ 364 ಹೆಂಗಸರಿದ್ದಾರೆ.[2]

ಈ ಗ್ರಾಮದಲ್ಲೂ ಜೀತ ಪದ್ಧತಿ, ಬಾಲ್ಯ ವಿವಾಹ ಇತ್ಯಾದಿ ಪದ್ಧತಿಗಳು ಸಂಪೂರ್ಣವಾಗಿ ನಾಶವಾಗಿವೆ. ಈ ಗ್ರಾಮವು ಉತ್ತಮವಾದಂತಹ ರಸ್ತೆ ಮಾರ್ಗಗಳನ್ನು ಹೊಂದಿದ್ದು, ಸಾರಿಗೆ ಸಂಪರ್ಕಕ್ಕೆ ಪೂರಕವಾಗಿದೆ.

ಈ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರ. ಅಂಗನವಾಡಿ ಕೇಂದ್ರಗಳು ಹಾಗೂ ಹಾಲು ಉತ್ಪಾದಕ ಸಹಕಾರ ಸಂಘ, ಮಹಿಳಾ ಸ್ವ-ಸಹಾಯ ಸಂಘಗಳು ಹಾಗೂ ಯುವಕ ಸಂಘಗಳು ಇವೆ. ಈ ಗ್ರಾಮದಲ್ಲಿ ಉತ್ತಮ ಒಳಚರಂಡಿ ವ್ಯವಸ್ಥೆ ಮತ್ತು ಉತ್ತಮ ಬೀದಿ ದೀಪದ ವ್ಯವಸ್ಥೆ ಇದೆ. ಗ್ರಾಮದಲ್ಲಿ ಹಲವಾರು ಜಾತಿಗಳಿದ್ದು, ಶಾಂತ ಜೀವನ ನಡೆಸುತ್ತಿದ್ದಾರೆ ಗ್ರಾಮದ ಅಭಿವೃದ್ಧಿಯಲ್ಲಿ, ಸಾಮೂಹಿಕ ಕಾರ್ಯದಲ್ಲಿ ಪ್ರತಿಯೊಂದು ಜನಾಂಗ ಒಟ್ಟಾಗಿ ಸೇರಿ ತಾತ್ಸಾರವಿಲ್ಲದೆ ಸಮಾನ ಭಾವದ ಕಾರ್ಯಕಲಾಪಗಳನ್ನು ಮಾಡುತ್ತಾರೆ.

ಈ ಗ್ರಾಮವು ಪರಿಪೂರ್ಣವಾಗಿ ಹಳ್ಳಿಯ ಸೊಗಡಿನಿಂದ ಕೂಡಿದ್ದು, ಪ್ರಗತಿಯ ಹಾದಿಯಲ್ಲಿದೆ. ಈ ಗ್ರಾಮವು ಪರವಾನಿಗೆ ಪಡೆದ 25 ತಂಬಾಕು ಬೆಳೆಗಾರರನ್ನು ಹೊಂದಿದೆ ಹಾಗೂ ಅಭಿವೃದ್ಧಿಯನ್ನು ಸಾಧಿಸುವ ಎಲ್ಲಾ ಲಕ್ಷಣಗಳನ್ನು ಹೊಂದಿಕೊಂಡಿದೆ.

ಈ ರೀತಿಯಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಗ್ರಾಮವಾಗಿರುವುದರಿಂದ ನನ್ನ ಅಧ್ಯಯನಕ್ಕೆ ಸೂಕ್ತವೆಂದು ಈ ಭಾಗದ ತಂಬಾಕು ಬೆಳೆಗಾರರನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಈ ಭಾಗದ ತಂಬಾಕು ಬೆಳೆಗಾರರಲ್ಲಿ ಹೆಚ್ಚಾಗಿ ಲಿಂಗಾಯಿತ ಸಮುದಾಯದವರು ಮೇಲುಗೈ ಸಾಧಿಸಿದ್ದಾರೆ. ಇದರಂತೆ ಪರಿಶಿಷ್ಟ ಜಾತಿಗೆ ಸೇರಿದ ಮೂವರು ಮಾತ್ರ ಪರವಾನಿಗೆ ಪಡೆದ ತಂಬಾಕು ಬೆಳೆಗಾರರಾಗಿದ್ದಾರೆ ಎಂಬುದನ್ನು ಈ ಮೂಲಕವಾಗಿ ದೃಢೀಕರಿಸಬಹುದಾಗಿದೆ.

ಹೀಗೆ ಅಧ್ಯಯನಕ್ಕೊಳಪಡಿಸಿದ ಗ್ರಾಮವಾದ ಮಡುವಿನಹಳ್ಳಿ ಗ್ರಾಮದ ಕೆಲವು ಪ್ರಮುಖವಾದಂತಹ ಅಂಶಗಳನ್ನು ಈ ಮೇಲ್ಕಂಡಂತೆ ತಿಳಿಸಬಹುದಾಗಿದೆ.

<u>ಹಾದನೂರು ವಡೆಯನಪುರ:</u>

ಈ ಗ್ರಾಮವು ಒಂದು ಚಿಕ್ಕ ಗ್ರಾಮವಾಗಿದ್ದು ಅಭಿವೃದ್ಧಿಯಲ್ಲಿ ಹಿಂದುಳಿದಿರುವಂತ ಗ್ರಾಮವಾಗಿದೆ. 2001ರ ಜನಗಣತಿಯ ಪ್ರಕಾರ ಒಟ್ಟು 537 ಜನರಿದ್ದಾರೆ. ಇದರಲ್ಲಿ 280 ಗಂಡಸರು 257 ಹೆಂಗಸರು. ಇದೇ ರೀತಿಯಾಗಿ ಪರಿಶಿಷ್ಠ ಜಾತಿಯಲ್ಲಿ 331 ಜನರಿದ್ದಾರೆ. ಇದರಲ್ಲಿ 171 ಗಂಡಸರು 160 ಹೆಂಗಸರು ಹಾಗೆಯೇ ಪರಿಶಿಷ್ಠ ಪಂಗಡದಲ್ಲಿ 11 ಜನರಿದ್ದಾರೆ. 7 ಗಂಡಸರು ಮತ್ತು 4 ಹೆಂಗಸರು. ಹೀಗೆ ಅತೀ ಕಡಿಮೆ ಜನಸಂಖ್ಯೆಯನ್ನೊಂದಿರುವ ಒಂದು ಚಿಕ್ಕ ಗ್ರಾಮವಾಗಿದೆ.[3]

ಹಾದನೂರು ವಡಯನಪುರ ಗ್ರಾಮವು ಮೈಸೂರಿನಿಂದ 61 ಕಿ.ಮೀಗಳಷ್ಟು ದೂರದಲ್ಲಿದೆ. ಹಿರಿಯರ ಅಭಿಪ್ರಾಯದಂತೆ ಈ ಗ್ರಾಮವು 1950ರಲ್ಲಿ ಸ್ಥಾಪಿಸಲ್ಪಟ್ಟಿತ್ತು. ಉನ್ನತ ವರ್ಗದವರ ಶೋಷಣೆಯಿಂದಾಗಿ ಜಾತಿ ಭೇದ ಸಮಸ್ಯೆಯಿಂದಾಗಿ ಬೇರೊಂದು ಊರಿನಿಂದ ಬಂದು ಈ ಗ್ರಾಮಕ್ಕೆ ನಾಗಯ್ಯನ ಹುಂಡಿ ಎಂದು ನಾಮಾಂಕಿತ ಮಾಡಿ ವಾಸ ಮಾಡುತ್ತಿದ್ದರು. ಕಾಲ ಕ್ರಮೇಣವಾಗಿ ಇದನ್ನು ಹಾದನೂರು ವಡೆಯನಪುರವೆಂದು ಕರೆಯಲಾಯಿತು. ಈ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯಿದೆ, 2 ಅಂಗನವಾಡಿ ಕೇಂದ್ರಗಳಿವೆ, ಮಹಿಳಾ ಸ್ವ-ಸಹಾಯ ಸಂಘಗಳಿವೆ ಹಾಗೂ ಅಂಬೇಡ್ಕರ್ ಯುವಕ ಸಂಘವಿದೆ.[4]

ಈ ಗ್ರಾಮಕ್ಕೆ ಸರಿಯಾದ ರಸ್ತೆ ಮಾರ್ಗಗಳಿಲ್ಲ, ಈ ಗ್ರಾಮವು ಇನ್ನೂ ಸಹಾ ಮುಖ್ಯವಾದಂತಹ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ, ಬಹುತೇಕರು ಬಡತನ ರೇಖೆಗಿಂತ ಕೆಳಗಿದ್ದಾರೆ. ಈ ಗ್ರಾಮಗಳಲ್ಲಿ ಒಟ್ಟು 25 ಜನ ತಂಬಾಕು ಬೆಳೆಗಾರರಿದ್ದು, ಪರಿಶಿಷ್ಠ ಜಾತಿಗೆ 10 ಜನ ತಂಬಾಕು ಬೆಳೆಗಾರರು ಸೇರಿದ್ದಾರೆ. ಸಂಪೂರ್ಣವಾಗಿ ಈ ಗ್ರಾಮವು ಹಿಂದುಳಿದಿರುವಂತಹ ಒಂದು ಗ್ರಾಮವಾಗಿದೆ.

ಈ ಗ್ರಾಮದಲ್ಲಿ ಬಹುತೇಕರು ಕೂಲಿ ಕಾರ್ಮಿಕರಾಗಿದ್ದಾರೆ. ಗ್ರಾಮದಲ್ಲಿ ಕೆಲಸ ಕಾರ್ಯಗಳು ಕಡಿಮೆಯಾದಾಗ ಕಾಡಿನ ಉತ್ಪನ್ನಗಳನ್ನು ಮಾರಿ ಜೀವನ ನಡೆಸುತ್ತಾರೆ.

ಅನಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ 14 ವರ್ಷದೊಳಗಿನ ಮಕ್ಕಳು ಪಡೆಯುತ್ತಿದ್ದಾರೆ. ಪ್ರೌಢಶಿಕ್ಷಣವನ್ನು 80% ದಷ್ಟು ಮಕ್ಕಳು ಪಡೆಯುತ್ತಿದ್ದಾರೆ. ಪದವಿಪೂರ್ವ ಶೀಕ್ಷಣವನ್ನು 40% ದಷ್ಟು ಮಕ್ಕಳು ಪಡೆಯುತ್ತಿದ್ದಾರೆ. ಪದವಿ ಹಾಗೂ ಉನ್ನತ ವ್ಯಾಸಂಗವು 10%ದಷ್ಟಿದೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣವು ತುಂಬಾ ಕಡಿಮೆ ಪ್ರಮಾಣದಲ್ಲಿದೆ.

ಮೂಢನಂಬಿಕೆ ಹಾಗೂ ಮತ್ತಿತರ ಕಾರಣಗಳಿಂದಾಗಿ ಈ ಗ್ರಾಮದ ಭಾಗದ ಜನರು ತಮ್ಮ ಹೆಣ್ಣುಮಕ್ಕಳನ್ನು ಪ್ರೌಢಶಿಕ್ಷಣದ ನಂತರ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಾರೆ. 16 ಹಾಗೂ 18ನೆಯ ವಯಸ್ಸಿನಲ್ಲಿಯೇ ಮದುವೆಯಾಗುವುದೇ ವಿದ್ಯಾಭ್ಯಾಸದ ಕುಂಠಿತಕ್ಕೆ ಕಾರಣವಾಗಿದೆ.

5.2.1 ಸಾಗುವಳಿಯ ಪ್ರಮಾಣ/ ಮಣ್ಣಿನ ವರ್ಗೀಕರಣ:

ತಂಬಾಕು ಬೆಳೆಗಾರರು ಈ ಗ್ರಾಮದಲ್ಲಿ ಅಷ್ಟೇನು ದೊಡ್ಡ ಪ್ರಮಾಣದಲ್ಲಿ ಸಾಗುವಳಿಯನ್ನು ಹೊಂದಿಲ್ಲ, ಹೆಚ್ಚೆಂದರೆ 15-20 ಎಕರೆ ಹಾಗೂ ಕಡಿಮೆಯೆಂದರೆ ಎರಡು ಎಕರೆಯನ್ನು ಹೊಂದಿರುತ್ತಾರೆ. ಈ ಗ್ರಾಮದಲ್ಲಿ ಹೆಚ್ಚಾಗಿ ಕಡಿಮೆ ಪ್ರಮಾಣದ ಸಾಗುವಳಿಯನ್ನು ಹೊಂದಿರುವ ಸಣ್ಣ ಹಿಡುವಳಿದಾರರು ಕಂಡುಬರುತ್ತಾರೆ. 2% ಅಥವಾ 3%ದಷ್ಟು ಮಾತ್ರ ರೈತರು ದೊಡ್ಡ ಹಿಡುವಳಿಯನ್ನು ಹೊಂದಿದ್ದಾರೆ. ಈ ಗ್ರಾಮವನ್ನು, ಮುಂದುವರಿಯುತ್ತಿರುವ ಗ್ರಾಮವಾಗಿ ಕಂಡು ಬರುತ್ತಿರುವ ಮಡುವಿನ ಹಳ್ಳಿ ಗ್ರಾಮಕ್ಕೆ ಹೋಲಿಕೆ ಮಾಡಿದಾಗ ಸಾಗುವಳಿದಾರರ ಭೂಮಿಯ ಪ್ರಮಾಣ ತುಂಬಾ ಕಡಿಮೆಯಾಗಿದೆ. ಹೆಚ್ಚಾಗಿ ಲಿಂಗಾಯತ ಸಮುದಾಯವನ್ನು ಹೊಂದಿರುವ ಮಢುವಿನಹಳ್ಳಿ ಗ್ರಾಮವು ಹೆಚ್ಚಾಗಿ ದೊಡ್ಡ ಹಿಡುವಳಿದಾರರನ್ನು ಹೊಂದಿಕೊಂಡಿದೆ. ಪರಿಶಿಷ್ಟ ಜಾತಿ ಮತ್ತು ಲಿಂಗಾಯಿತ ಸಮುದಾಯದಲ್ಲಿ, ಲಿಂಗಾಯಿತ ಸಮುದಾಯದವರೇ ಹೆಚ್ಚಿನ ಭೂಮಿಯನ್ನು ಹೊಂದಿದ್ದಾರೆ. ಕ್ಷೇತ್ರ ಅಧ್ಯಯನದ ಮೂಲಕ ತಿಳಿದು ಬಂದ ವಿಷಯ ಎರಡು ಗ್ರಾಮಗಳಲ್ಲಿ ಲಿಂಗಾಯತ ಹಾಗೂ ಕುರುಬ ಜಾತಿಗಳಿಂದ ಒಟ್ಟು 50 ರೈತರಲ್ಲಿ 15 ಜನರು 10 ರಿಂದ 25 ಎಕರೆವರೆಗೆ ಜಮೀನನನ್ನು ಹೊಂದಿರುತ್ತಾರೆ. ಉಳಿದಂತೆ ಇತರೆ ಹಾಗೂ ಪರಿಶಿಷ್ಟ ಜಾತಿ ವರ್ಗದವರು 3ರಿಂದ 12 ಎಕರೆವರೆಗೆ ಸಾಗುವಳಿಯನ್ನು ಹೊಂದಿರುತ್ತಾರೆ.

ಈ ಗ್ರಾಮಗಳಲ್ಲಿ ಭೂಹಂಚಿಕೆಯ ಪ್ರಮಾಣವು ಅಸಮತೋಲನದಲ್ಲಿದೆ. ಉನ್ನತ ವರ್ಗದ ಕೈಯಲ್ಲಿರುವುದು ಇತಿಹಾಸದ ಅನುಮೋದನೆಯೇ ಸರಿ.

ಮಣ್ಣಿನ ವರ್ಗೀಕರಣ ಕೋಷ್ಟಕ:


ವಿವರ	ಎಕರೆಗಳಲ್ಲಿ	ಶೇಕಡಾ	ಕೋನ
ಕೆಂಪು ಮಣ್ಣು	150	30%	108
ಮರಳು ಮಿಶ್ರಿತ	135	27%	97.2
ಕಪ್ಪು ಮಣ್ಣು	65	13%	46.8
ಕೆಂಪು ಮಿಶ್ರಿತ	100	20%	72
ಶೇಂದ್ರಿಯ ಮಣ್ಣು	90	10%	36
ಒಟ್ಟು	**500**	**100%**	**360^0**

ಕೋಷ್ಟಕ 5.1

ಮಣ್ಣಿನ ವರ್ಗೀಕರಣ

ಈ ಪ್ರದೇಶವಲ್ಲಿ ಕಂಡುಬರುವ ಮಣ್ಣುಗಳು ವ್ಯತ್ಯಾಸದಿಂದ ಕೂಡಿದ್ದು, ಫಲವತ್ತತೆಯನ್ನು ಹೊಂದಿರುವ ಭೂಮಿಗಳಾಗಿವೆ, ಸಾಂಪ್ರದಾಯಿಕ ಹಾಗೂ ಟ್ರ್ಯಾಕ್ಟರ್‌ಗಳ ಮೂಲಕ ಉಳುಮೆ ಮಾಡಲಾಗುತ್ತದೆ.

ಮಣ್ಣಿನ ವರ್ಗೀಕರಣದ ನಕ್ಷೆಯನ್ನು ಈ ಕೆಳಗಿನಂತೆ ತೋರಿಸಬಹುದಾಗಿದೆ.



(ಆಧಾರ: ಕ್ಷೇತ್ರ ಅಧ್ಯಯನ) ಚಿತ್ರ 5.1

ಈ ಪ್ರಾಂತ್ಯಗಳು ಸಮತಟ್ಟಾದ ಪ್ರದೇಶದಲ್ಲಿದ್ದು, ಉತ್ತಮ ಫಲವತ್ತೆಯಿಂದ ಕೂಡಿದ ಮಣ್ಣಿನಿಂದಿವೆ. ಇಲ್ಲಿ ವಿವಿಧ ರೀತಿಯ, ವಿವಿಧ ವರ್ಗದ ಮಣ್ಣುಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇಲ್ಲಿ

ಕೆಂಪು ಮಣ್ಣು, ಕೆಂಪು ಮಿಶ್ರಿತ, ಶೇಂದ್ರೀ೦ಯ ಮಣ್ಣು, ಕಪ್ಪು ಮಣ್ಣು, ಮರಳು ಮಿಶ್ರಿತ ಎಂಬ ವಿವಿಧ ರೀತಿ೦ಯ ಮಣ್ಣುಗಳಿವೆ.[5]

ತಂಬಾಕು ಬೆಳೆ೦ಯನ್ನು ಬೆಳೆ೦ಯಲು ಈ ಭಾಗದ ಜನರು ಹೆಚ್ಚಾಗಿ ಕೆಂಪು ಮಿಶ್ರಿತ ಹಾಗೂ ಕೆಂಪುಮಣ್ಣನ್ನು ಆ೦ಯ್ಕೆ ಮಾಡಿಕೊಳ್ಳುತ್ತಾರೆ. ಕೆಂಪುಮಣ್ಣು ಈ ಪ್ರಾಂತ್ಯಗಳಲ್ಲಿ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡಿದೆ. ಊರಿನ ಅಕ್ಕಪಕ್ಕದ್ದಲ್ಲಿ ಕಡಿಮೆ ಪ್ರಮಾಣದಲ್ಲಿ ಮರಳು ಮಿಶ್ರಿತ ಮಣ್ಣು ಕಂಡರೂ, ದೂರ ಹೋದಂತೆ, ಕೆಂಪು ಮಣ್ಣು ಹೆಚ್ಚಾಗಿ ಕಾಣುತ್ತದೆ.

ವಿವಿಧ ರೀತಿ೦ಯ ತಂಬಾಕು ತಳಿಗಳಿಗೆ ವಿವಿಧ ಮಣ್ಣಿನ ವರ್ಗಗಳಿವೆ. ಇಲ್ಲಿ ವಿಶೇಷ ತಳಿಗೆ ಕೆಂಪು ಮಿಶ್ರಿತ ಮಣ್ಣನ್ನು ಹೆಚ್ಚಾಗಿ ಬಳಸುತ್ತಾರೆ. ಮೆಟಿ ಎಂಬ ತಳಿ೦ಯನ್ನು ಈ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಬೆಳೆ೦ಯುತ್ತಾರೆ. ಭೂಮಿ೦ಯ ಫಲವತ್ತತೆ೦ಯ ತಂಬಾಕು ಬೆಳೆಗೆ ಮಾತ್ರವಲ್ಲದೆ ಇತರ ಬೆಳೆಗಳಿಗೂ ಮುಖ್ಯವಾದಂತಹುದು. ಈ ನಿಟ್ಟಿನಲ್ಲಿ ಈ ಪ್ರಾಂತ್ಯದಲ್ಲಿ ಕಂಡುಬರುವಂತಹ ಭೂಮಿ೦ಯು ಮೂಲತ: ಫಲವತ್ತತೆಯಿಂದ ಕೂಡಿದ್ದಾಗಿದೆ ಎಂಬುದನ್ನು ತಿಳಿದಿದ್ದು, ತಂಬಾಕಿನ ಬೆಳೆಯಿಂದಾಗಿ ಕಾಲಕ್ರಮೇಣ ಈ ಫಲವತ್ತತೆ೦ಯು ಕಡಿಮೆ೦ಯಾಗುವ ವಿಚಾರವನ್ನು ರೈತರ ಅಭಿಪ್ರಾ೦ಯದಿಂದ ತಿಳಿ೦ಯಬಹುದಾಗಿದೆ.

ಈ ಮೇಲ್ಕಂಡತೆ೦ಯೆ ಈ ಪ್ರಾಂತ್ಯಗಳು ವ್ಯತ್ಯಾಸದಾ೦ಯಕವಾದಂತಹ ಹಾಗೂ ವಿಶೇಷವಾದಂತಹ ರೀತಿ೦ಯಲ್ಲಿ ಮಣ್ಣಿನ ವರ್ಗೀಕರಣವನ್ನು ಹೊಂದಿವೆ.

5.2.2 ತಂಬಾಕು ಬೆಳೆಗಾರರ ಅನುಭವ

ಅಧ್ಯ೦ಯನಕ್ಕೊಳಪಡಿಸಿದ ಗ್ರಾಮಗಳಾದ ಹಾಡನೂರು ವಡ೦ಯನಪುರ ಮತ್ತು ಮಡುವಿನಹಳ್ಳಿ ಗ್ರಾಮಗಳ ತಂಬಾಕು ಬೆಳೆಗಾರರು ಆದಷ್ಟು ಹೆಚ್ಚಿನ ರೀತಿ೦ಯಲ್ಲಿ ಅನುಭವ ಪಡೆದಿದ್ದಾರೆ. ಇದರಲ್ಲಿ 6 ವರ್ಷದಿಂದ 34 ವರ್ಷದವರೆಗಿನ ಅನುಭವ ಪಡೆದ ತಂಬಾಕು ಬೆಳಗಾರರನ್ನು ಈ ಭಾಗದಲ್ಲಿ ಕಾಣಬಹುದಾಗಿದೆ.

ಅಧ್ಯ೦ಯನಕ್ಕೊಳಪಡಿಸಿದ ಒಟ್ಟು 50 ಜನ ತಂಬಾಕು ಬೆಳೆಗಾರರಲ್ಲಿ 27 ಜನರು 15ರಿಂದ 30 ವರ್ಷದೊಳಗಿನ ಅನುಭವವನ್ನು ಪಡೆದಿರುತ್ತಾರೆ ಉಳಿದ 23 ಜನ ತಂಬಾಕು ಬೆಳೆಗಾರರು 6ರಿಂದ 14 ವರ್ಷದೊಳಗಿನ ಅನುಭವವನ್ನು ಪಡೆದಿರುತ್ತಾರೆ. ತಂಬಾಕು ಬೆಳೆ೦ಯನ್ನು ಈ ಗ್ರಾಮಗಳಲ್ಲಿ ವಂಶಪಾರಂಪ೦ರ್ಯವಾಗಿ ಬೆಳೆದುಕೊಂಡು ಬಂದಿರುತ್ತಾರೆ.

ಪರವಾನಿಗೆ ಪಡೆದು ಬ್ಯಾರನ್ ಇರುವ ತಂಬಾಕು ಬೆಳೆಗಾರನ ಕುಟುಂಬದಲ್ಲಿ ಈ ತಂಬಾಕು ಬೆಳೆ೦ಯು ೦ಯಾವುದೇ ಕಾರಣಕ್ಕೂ ತಂಬಾಕು ಬೆಳೆ೦ಯುವುದನ್ನು ನಿಲ್ಲಿಸುವುದಿಲ್ಲ. ಆದಾ೦ಯದ ಪ್ರಮುಖ

ಮೂಲವಾಗಿ ತಂಬಾಕು ಬೆಳೆಯನ್ನು ಆಶ್ರಯಿಸಿರುವುದರಿಂದ ಪ್ರತಿ ವರ್ಷವು ಈ ಬೆಳೆಯನ್ನು ಬೆಳೆಯುವುದರಿಂದ ತಂಬಾಕು ಬೆಳೆಗಾರನು ಹೆಚ್ಚಿನ ಅನುಭವವನ್ನು ಪಡೆದುಕೊಂಡಿರುತ್ತಾನೆ.

ಈ ಮೇಲ್ಕಂಡಂತೆ ತಂಬಾಕು ಬೆಳೆಯುವಲ್ಲಿ ರೈತರು ಹೊಂದಿರುವ ಅನುಭವವನ್ನು ಗುರುತಿಸಬಹುದಾಗಿದೆ.

5.2.3 ಆಸ್ತಿಯ ವಿವರ:

ಅಧ್ಯಯನಕ್ಕೊಳಪಡಿಸಿದ ಈ ಭಾಗದ ತಂಬಾಕು ಬೆಳೆಗಾರರ ಪೈಕಿ ಅಧಿಕ ಪ್ರಮಾಣದಲ್ಲಿ ಭೂಮಿಯು ಪಿತ್ರಾರ್ಜಿತವಾಗಿ ಬಂದಿರುವಂತದ್ದು ತಿಳಿದು ಬಂದಿದೆ. ಈ ಭಾಗದಲ್ಲಿ ಕಂಡುಬರುವ ಭೂಮಿಗಳು ಹಿರಿಯರು ಮಾಡಿದಂತಹ ಆಸ್ತಿಗಳಾಗಿವೆ.

ಅಧ್ಯಯನಕ್ಕೊಳಪಡಿಸಿದ ತಂಬಾಕು ಬೆಳೆಗಾರರಲ್ಲಿ ಕೆಲವರು ಮಾತ್ರ ಪಿತ್ರಾರ್ಜಿತಯೊಂದಿಗೆ ಸ್ವಯಾರ್ಜಿತ ಆಸ್ತಿಯನ್ನು ಮಾಡಿಕೊಂಡಿದ್ದಾರೆ.

ಸ್ವಯಾರ್ಜಿತ ಭೂಹಿಡುವಳಿ ಕುಂಠಿತವಾಗಲು ಇರುವ ತೊಂದರೆಗಳು:

- ಭೂಮಿಯ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೆ ಏರುತ್ತಿದೆ.
- ಭೂಹಿಡುವಳಿ ಮಾಡಲು ಇರುವ ಕಾನೂನು ಕ್ರಮಗಳು.
- ಒತ್ತುವರಿ ಸಮಸ್ಯೆಗಳು.
- ವಲಸೆ ಹೋಗುವುದರಿಂದ.
- ಫಲವತ್ತಾದ ಭೂಮಿ ದೊರೆಯದಿರುವಿಕೆ.
- ಆರ್ಥಿಕ ಸಮಸ್ಯೆಗಳು.

